ಅಪರಂಜಿ

ಮೇ
1995

ಕಿಲನಗೆಯ ಕಾರಂಜಿ



- ಪ್ರಕಾಶ್
- ವಿಕಟಕವಿ
- ಶಿವು
- ಅರುಣಾ
- ಪ್ರಭಾ
- ನಂದಿನಿ ಕಾಪಡಿ
- ನಾಚಿ
- ಎಚ್. ಆರ್. ಪ್ರಭಾಕರ
- ವಿಜಯಾ ಸಚ್ಚಿದಾನಂದ
- ಲೆ; ಬಿ. ನ. ನರಹರಿ
- ಅ. ರಾ. ಸೇ.

ಬಿಡಿ ಪ್ರತಿ: 2 ರೂ. 50 ಪೈ.

ಸಂಪುಟ ೧೨ ನೋ. ೧೯೯೫ ಸಂಚಿಕೆ ೮

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ :
2 ರೂ 50 ಪೈಸೆ
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ :
250 ರೂ.

ವಿಳಾಸ :
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ,
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8 ರಿಂದ
10 ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003

// ಅಪರಂಜಿ
(ತಿಳಿನಗೆಯ ಕಾರಂಜಿ)

ಸಂಪುಟ ೧೨ ನವೆಂಬರ್ ೧೯೯೫ ಸಂಚಿಕೆ ೮

ಮನಸ್ಸನ್ನು ಆತ್ಮನಲ್ಲಿ ಸ್ಥಿರಗೊಳಿಸಲು ಯತ್ನಿಸುವುದಕ್ಕಿಂತ ಆತ್ಮ ವಿಚಾರವು ಹೆಚ್ಚಿನದು. ಅದಕ್ಕಿಂತ ಆತ್ಮ ಪ್ರತ್ಯಯದಲ್ಲಿರುವುದು ಹೆಚ್ಚಿನದು. ಅದಕ್ಕಿಂತ ಕರ್ಮ ಫಲತ್ಯಾಗ ಹೆಚ್ಚು, ಅದರಿಂದ ಶಾಂತಿ,

—ಗೀತಾ

ಆತ್ಮ ವಿಚಾರದಲ್ಲಿ ತೊಡಗಿದಾಗ, ಸತತವಾದ ಆತ್ಮ ಪ್ರತ್ಯಯವುಂಟಾಗುತ್ತದೆ.

ಆತ್ಮನು ಕರ್ಮದ ಲೇಪವಿಲ್ಲದವನೆಂದು ಮೊದಲೇ ಹೇಳಲಾಗಿದೆ, ಕರ್ಮ ಫಲವನ್ನು ತ್ಯಜಿಸಿದರೆ ಕರ್ಮ ಬಂಧವಾಗುವುದಿಲ್ಲ ತಾನೇ. ಆದುದರಿಂದ ಕರ್ಮಫಲ ತ್ಯಾಗವುಂಟಾದ ಹಾಗೇ ಆಯಿತು ತಾನೇ. ಆದ್ದರಿಂದ ಕರ್ಮಫಲ ತ್ಯಾಗವನ್ನು ಶ್ರೀಕೃಷ್ಣನು ಇಲ್ಲಿ ಹೊಗಳಿದ್ದಾನೆ.

ಅಗಸ್ತ್ಯನೆಂಬ ಬ್ರಾಹ್ಮಣನು ಸಮುದ್ರವನ್ನೇ ಕುಡಿದನೆಂದು ಹೇಳಿದೆ. ಈ ದೃಷ್ಟಾಂತದಿಂದ ಬ್ರಾಹ್ಮಣರನ್ನು ಹೊಗಳಿದ ಹಾಗೆ, ಮೋಕ್ಷ ಸಾಧನವೆಂಬ ಕಾರಣ ದಿಂದ ಕರ್ಮ ಫಲತ್ಯಾಗವನ್ನು ಹೊಗಳಿದೆ.

ಈಗಲಾದರೋ. ಏನು ಮಾಡಿದರೂ ಫಲ, ಕೈಗೆ ದೊರಕುವುದೆಂಬ ನಂಬಿಕೆ ಯಿಲ್ಲ, ಯಾವಾಗ ಯಾವ ಕಾನೂನು ಹುಟ್ಟಿ ಯಾವ ದೊಂಬಿಯಾಗಿ ಕೈಗೆಟುಕಿದ ರುಂಟು ಇಲ್ಲದಿದ್ದರಿಲ್ಲ, ಪರೀಕ್ಷೆಗಳ ದೃಷ್ಟಾಂತವನ್ನೇ ನೋಡಿ, ಯಾವ ಪರೀಕ್ಷಾರ್ಥಿಗೆ ಏನು ಫಲವೋ !

ಆದುದರಿಂದ ಕರ್ಮ ಫಲತ್ಯಾಗ ನಿರ್ಬಂಧದಿಂದಲೇ ಸಾಧಿಸಲ್ಪಡುತ್ತದೆ, ಸ್ವಲ್ಪ ಕಣ್ತೆರೆದು, ಚಿಂತನೆಯನ್ನರಳಿಸಿ ಈಕ್ಷಿಸಿ,

ಈ ಬಲೋದ್ಬಂಧದ ಕರ್ಮ ಫಲತ್ಯಾಗಕ್ಕಿಂತ ಪರಮೇಶ್ವರ. ಈ ನನ್ನ ಪಾಡು ನಿನಗೆ ಪ್ರೀತಿಯಾಗಲಿ ಎಂದು ಆರ್ತ ಭಕ್ತಿಯನ್ನವಲಂಬಿಸುವುದು ಉತ್ತಮ.

ಲಕ್ಷ್ಮೀಶನಿಗೆ ಹಾಗೇ ಎನ್ನಿಸಿರ ಬೇಕು, ಅದಕ್ಕೇ ಆವನು 'ಬಿತ್ತರದ ಕಾವ್ಯ ರಚನೆಗೆ ದೇವತಾಸ್ತುತಿ ನೆಗಳ್ದಂತೆ' ಎಂದು ಉಪಮಾನ ಕೊಟ್ಟಿದ್ದಾನೆ.



ಪ್ರಕಾಶ್

ರಾಜಕೀಯ ಪ್ರವೇಶಕ್ಕೆ ಶೇಷನ್ ಸಿದ್ಧ

—ಪತ್ರಿಕೆ

ಆದರೆ ಭಾರತದ ರಾಜಕೀಯ ಸಿದ್ಧವಿರಬೇಕಲ್ಲ ? !

* * *

ಪಾಕೀಸ್ತಾನಕ್ಕಾಗಿ ಆಡಲು ಅಕ್ರಮ್ ಸಮ್ಮತಿ

ಕ್ರೀಡಾ -ಸುದ್ದಿ

ಅವರ ಅಕ್ರಮಗಳು ಸಕ್ರಮ ಗೊಂಡಂತಿವೆ ! !

* * * *

ಅರ್ಧದಲ್ಲೇ ಶಾಲೆ ಬಿಡುವ ಮಕ್ಕಳು

—ಪತ್ರಿಕೆ

ಬುದ್ಧಿವಂತರು ! !

* * *

ನನಗೂ ಚೆನ್ನಾರೆಡ್ಡಿಯವರಿಗೂ ಶೀತಲ ಸಮರವಿಲ್ಲ

—ಶ್ರೀಮತಿ ಜಯಲಲಿತ

ಹೌದು, ಕಾವೇರಿದ ಜಗಳವೇ ಜಾಸ್ತಿ !

• • • •

ದಾವೂದ್ ಸಹಚರರಿಗೆ ಈಸ್ಟ್ ವೆಸ್ಟ್ ಏರ್‌ಲೈನ್ಸ್ ಧನ ಸಹಾಯ

—ಪತ್ರಿಕೆ

ಅದನ್ನೀಗ ನಾರ್ತ್–ಸೌತ್ ಏರ್‌ಲೈನ್ಸ್ ಅನ್ನ ಬಹುದು !

* * *

ಕೆ.ಪಿ.ಎಸ್.ಸಿ. ಪರೀಕ್ಷೆ ; 0 ಬರ ಬೇಕಾದವರಿಗೆ 140 ಅಂಕಗಳು !

—ಸುದ್ದಿ

ವಿಶಾಲ ಹೃದಯ ಅಂದರೆ ಇದೇ ! !

* * * *

ದೇವೇಗೌಡರ ರಥಕ್ಕೆ ಕೃಷ್ಣ ಸಾರಥಿಯಾಗಲಿ

—ಶ್ರೀ ಪೇಜಾವರ ಸ್ವಾಮಿಗಳು

ಆ ರಥದ ಧ್ವಜವಂತೂ ಸಿದ್ಧವಾಗಿದೆ !

* * *

ಮೂರು ಜನ ಮಂಗಳೂರು ಕಸ್ಟಂಸ್ ಅಧಿಕಾರಿಗಳ ವಿರುದ್ಧ ಆರೋಪ

—ಸುದ್ದಿ

ಬೇಲಿಯೇ ಹೊಲ ಮೇದಂತೆ !

* * * *

ಎಂ. ಎಸ್. ಷೂಸ್ ಕಂಪೆನಿ ಅಧಿಕಾರಿ ಸಚ್–ದೇವ ಬಂಧನ

—ಸುದ್ದಿ

ಅವರ ಹೆಸರನ್ನಾದರೂ ಬದಲಾಯಿಸ ಬೇಕು !

* * *

ಮುಂದಿನ ಸಾಲಿನ ಹುಡುಗರು

–ವಿಕಟಕವಿ

ಮುಂದಿನ ಸಾಲಿನ ಹುಡುಗರು ನಾವು
ನಮಗೆಂದೆಂದಿಗು ಸುಖವಿಲ್ಲ !
ಬಗ್ಗಿಹ ತಲೆಗಳ ಮೇಲಕೆ ಎತ್ತೆವು
ಹೊರಗಿನ ಪರಿವೆಯೆ ನಮಗಿಲ್ಲ !

ನಡುರಾತ್ರಿಯಲೂ ಹಣತೆಯನ್ನುರಿಸುತ
ಅಂಕದ ಶಿಖರನೇರುವೆವು !
ಹಿಂದಿನ ಸಾಲಿನ ಹುಡುಗರ ನೋಡುತ
ಬಿಂಕದಿ ಮುಖಗಳ ಮೂಡುವೆವು !

ವರುಷ ವರುಷವೂ ನದಿಯನು ದಾಟುತ
ಹೊಸ ವಿದ್ಯಾರ್ಥಿಗಳಾಗುವೆವು !
ಪುಟಗಳ ತಿರುವುತ, ತಟತಟ ಓದುತ
ಪುಸ್ತಕ ಕೀಟಗಳಾಗುವೆವು !

ಜತೆಯಲಿ ಕೂರುವ ಅಣ್ಣ ತಮ್ಮದಿರ
ನಸುನಗುತಲಿ ನಾವ್ ನೋಡುವೆವು !
ನಮ್ಮಂತಾಗಲು ಅವರಿಗೆ ಎಂದೂ
ಸಾಧ್ಯವಿಲ್ಲವೆಂದೆನ್ನುಗವು !

ಮುಂದಿನ ಸಾಲಿನ ಹುಡುಗರು ನಾವು
ನಮಗೆಂದೆಂದಿಗು ಸುಖವಿಲ್ಲ !
ಏನಿದು, ಏತಕೆ, ಏಕಿದು ಹೀಗಿದೆ
ಎನ್ನಲು ನಮಗೋ ಟೈಮಿಲ್ಲ !

ಮುಂದಿನ ಸಾಲಿನ ಹುಡುಗರು ನಾವು
ನಮಗೆಂದೆಂದಿಗು .... !

(ನರಸಿಂಹ ಸ್ವಾಮಿಯವರ ಕ್ಷಮೆ ಇರಲಿ !)

ಪ್ರಿಯ ಓದುಗರೆ......

ಶಿವು

ನಮ್ಮ ಡೀಪ್‌ರೂಟೆಡ್ ಕಲರ್ ಕಾನ್ಷಸ್‌ನೆಸ್ಸೋ ಏನೋ ಕಾಣೆ–ಬ್ಲಾಕ್‌ಹೋಲ್‌ಗೆ ನಮ್ಮ ಓದುಗರನ್ನು ಹೋಲಿಸಿದಾಕ್ಷಣ, ಸ್ವಲ್ಪವೂ ವಿಳಂಬವಿಲ್ಲದೇ, ಅಪರಂಜಿಯ ಯುಗಾದಿ ವಿಶೇಷ ಸಂಚಿಕೆಯ ಬಗ್ಗೆ ನಿಮ್ಮೆಲ್ಲರಿಂದ ಹಲವಾರು ಪ್ರತಿಕ್ರಿಯೆಗಳು ಮೂಡಿ ಬಂದಿವೆ. ಕೆಲವರು ತಮ್ಮ ಅನಿಸಿಕೆಗಳನ್ನು ಮುಖತಃ ತಿಳಿಸಿದ್ದರೆ, ಇನ್ನು ಹಲವರು ತಮ್ಮ ಅಭಿಪ್ರಾಯಗಳನ್ನು ಬರೆದು ಕಳಿಸುವ ಸೌಜನ್ಯ ತೋರಿದ್ದಾರೆ. ಇವರೆಲ್ಲರಿಗೂ ಅಪರಂಜಿ ಆಭಾರಿ.

ಶೃಂಗೇರಿಯ ರಾಮಚಂದ್ರ ಸ್ವಾಮಿಯವರು, ಸ್ಟೀಫನ್ ಹಾಕಿಂಗ್‌ನ Black holes ain't so Black ಹೇಳಿಕೆಯನ್ನುದ್ಧರಿಸಿ, ತಮ್ಮ ಪ್ರತಿಕ್ರಿಯೆಯನ್ನು ಸಮರ್ಥಿಸಿಕೊಂಡಿದ್ದರೆ, ಮಂಗಳೂರಿನ ಯು. ಎಸ್. ರಾವ್ ಅವರು" ಅಪರಂಜಿ ಒಂದು ಪ್ರೈವೆಟ್ ಕ್ಲಬ್ ಇದ್ದಂತೆ. ಕ್ಲಬ್ ಸದಸ್ಯರಿಗೆ ಪ್ರತಿಕ್ರಿಯಿಸುವ ಅಗತ್ಯವೇ ಇಲ್ಲ. ಅವರದ್ದೇ ಕ್ಲಬ್ಬು" ಎಂದು ಪ್ರಾರಂಭಿಸಿ, ಮುಂದೆ" ಶ್ರದ್ಧಾ, ಗಿಡ್ಡ ಹೆಂಡತಿ ಲೇಸೇ ?, ಬನ್ನಿ ಫೋಟೋಗ್ರಾಫ್‌ಗೋಣ, ಲೇಖನಗಳು ಚೆನ್ನಾಗಿದ್ದು ಒರಿಜಿನಲ್ ಆಗಿದ್ದವು" ಎಂದು ಬರೆದಿದ್ದಾರೆ. ಹೊನ್ನಾಳಿಯ ಬಿದಿರಹಳ್ಳಿ ನರಸಿಂಹ ಮೂರ್ತಿಯವರ ಪತ್ರ ನಿಜಕ್ಕೂ ಕುತುಹಲಕಾರಿ ಯಾಗಿದೆ. ಅವರು ಹೀಗೆ ಬರೆಯುತ್ತಾರೆ. "ನಿಮ್ಮ ಸಂಪಾದಕತ್ವದ 'ಅಪರಂಜಿ ಸುಮಾರು ಒಂದು ವರ್ಷದಿಂದ ಪ್ರತಿ ತಿಂಗಳು ನಮ್ಮನೆ ಬಾಗಿಲು ತಟ್ಟುತ್ತಿದ್ದಾಳೆ. ನನಗೆ ಹಾಸ್ಯ ಪ್ರಜ್ಞೆ ಇಲ್ಲ ಎಂಬ ಸಂಗತಿಯನ್ನು ನಿಮಗೆ ಯಾರು ಹೇಳಿದರು ? ಅಥವಾ ಯಾರೋ ಧಾರಾಳಿ ದಾತರು ನನ್ನ ಹೆಸರಿಗೆ ಚಂದಾ ಕಟ್ಟಿ ಉಡುಗೊರೆ ನೀಡುತ್ತಿದ್ದಾರೋ ? ನಾನು ಚಂದಾಕಳಿಸಿದ ಕೂಡಲೆ ಬಹಳಷ್ಟು ಪತ್ರಿಕೆಗಳು ನಿಂತು ಹೋಗಿವೆ. ಎಂದರೆ ನಿಮಗೆ ಅಪಶಕುನವಾಗಲಿಕ್ಕಿಲ್ಲವಷ್ಟೇ ? ಆದರೂ ತೇಜಸ್ವಿಯವರ ಮಿತ್ರರಾದ ನೀವು ಪ್ರತಿ ತಿಂಗಳು ತೇಜಸ್ವಿಯವರದ್ದೊಂದು ಲೇಖನವನ್ನ ಗ್ಯಾರಂಟಿಯಾಗಿ ಗಿಟ್ಟಿಸಿ, ಪ್ರಕಟಿಸುವುದಾದರೆ, ನಾನು 'ಅಪರಂಜಿಗೆ ಆಜೀವ ಚಂದಾದಾರ ನಾಗುತ್ತೇನೆ. ಯೋಚನೆಮಾಡಿ." ಸ್ವಾಮಿ, ನರಸಿಂಹ ಮೂರ್ತಿಯವರೆ, ತೇಜಸ್ವಿಯವರೆಲ್ಲಿ, ನಾವೆಲ್ಲಿ ! ಅಪರಂಜಿಗೆ ಬರೆಯಲು ಖಂಡಿತ ಅವರಿಗೆ ವ್ಯವಧಾನವಿಲ್ಲವೆಂದು ಗ್ಯಾರಂಟಿ ಕೊಡಬಲ್ಲೆ. ನಿಮ್ಮ ಆಜೀವ ಚಂದಾ ನೀವೆ ಉಳಿಸಿಕೊಳ್ಳಬಹುದು, ನಿಮ್ಮ ಮಿತ್ರರು ಕಳಿಸುತ್ತಿರುವ Gift Horse ಅನ್ನು ಹಲ್ಲೆಣಿಸದೇ ಸುಖದಿಂದ ಸವಾರಿಮಾಡಿ.

ಶ್ರೀಮತಿ ಅರುಣಾ ಹಾಗೂ ಶ್ರೀ ಪ್ರಭಾ (ಗೋಪಾಲಕೃಷ್ಣ) ಇವರುಗಳು ಬರೆದಿರುವ ಪ್ರತಿಕ್ರಿಯೆಗಳನ್ನು ಈ ಸಂಚಿಕೆಯಲ್ಲೇ ಅಚ್ಚಿಸಿದ್ದೇವೆ. ಹಾಸ್ಯಲೇಖನ ವಲ್ಲದ "ಮುಖಾಮುಖಿ" ಅಪರಂಜಿಯಲ್ಲೇಕೆ ಎಂಬ ಸಂಶಯವನ್ನು ಪ್ರಭಾರವ ರಂತೆಯೇ ಇನ್ನೂ ಹಲವು ಓದುಗರು ವ್ಯಕ್ತಪಡಿಸಿರುವುದರಿಂದ ಈ ಬಗ್ಗೆ ಸ್ವಲ್ಪ ಹಿನ್ನೆಲೆಯ ವಿವರ ನೀಡುವುದು ಉಚಿತ ಎನಿಸುತ್ತದೆ.

ಕಳೆದ ಹಲವಾರು ವರ್ಷಗಳಿಂದ ಅಪರಂಜಿ ಬರಹಗಾರ-ಗಾರ್ತಿಯರ ಬಳಗ ದಲ್ಲಿ ಅಪರಂಜಿಯಲ್ಲಿ ಎಂತಹ ಲೇಖನಗಳಿರಬೇಕೆಂಬುದರ ಬಗ್ಗೆ ಸತತವಾಗಿ ಸಂವಾದ ಗಳಾಗುತ್ತಿವೆ. ಕೇವಲ ನಗೆಯನ್ನು ಮೂಡಿಸುವ ಉದ್ದೇಶವಿರುವ ಲೇಖನಗಳಿಗೆ ಸೀಮಿತವಾಗಿರಬೇಕೆ ? ಅಥವಾ ಸ್ವಾರಸ್ಯ ಪೂರ್ಣವಾದ ಪ್ರವಾಸ ಕಥನಗಳು, ಪುಸ್ತಕ ಪರಿಚಯ, ಸಂದರ್ಶನಗಳು, ಇವುಗಳಿಗೂ ಅಪರಂಜಿಯಲ್ಲಿ ಸ್ಥಾನವಿರಬೇಕೆ ? ಎಂಬ ಪ್ರಶ್ನೆಯನ್ನು ವಿಪುಲವಾಗಿ ಚರ್ಚಿಸಿ, ಈಗ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಹಿಂದೊಮ್ಮೆ ನಾನು ಬರೆದಿದ್ದ ರಾಬರ್ಟ್ ಪಿರ್‌ಸಿಗ್‌ನ "ಲೀಲಾ ಪುಸ್ತಕದ ಪರಿಚಯ, ಈಚಿನ ತೇಜಸ್ವಿಯವರ ಸಂದರ್ಶನ, ಇವು ಅಪರಂಜಿಯಲ್ಲಿ ಬೆಳಕು ಕಂಡಿರುವುದು ಈ ಹೊಸ ಚಿಂತನೆಯ ಫಲ.

ಈ ಬಾರಿ ಅನೇಕ ಹೊಸಲೇಖಕರು ನಮ್ಮ ಬಳಗವನ್ನು ಸೇರಿದ್ದಾರೆ. ಎಚ್. ಆರ್. ಪ್ರಭಾಕರ ಅವರು ತಮ್ಮ ಅಸ್ಸಾಂ ಪ್ರವಾಸದ ಸೊಗಸಾದ ಚಿತ್ರಣವನ್ನು ನೀಡಿದ್ದಾರೆ. "ನಾಚಿ" ಅವರ ಲೇಖನ ಅತ್ಯಂತ ಖುಷಿಕೊಡುವ ಹಾಸ್ಯಪ್ರಜ್ಞೆಗೆ ಉತ್ತಮ ನಿದರ್ಶನ. ಜಿ. ವಿ. ಅರುಣಾರವರು ತಮ್ಮ ಲೇಖನದಲ್ಲಿ Twist in the tail ತಂತ್ರವನ್ನು ಯಶಸ್ವಿಯಾಗಿ ಬಳಸಿದ್ದಾರೆ. ವಿಜಯಾ ಸಚ್ಚಿದಾನಂದ ಅವರ ಲೇಖನದಲ್ಲಿ ಹೊಟ್ಟೆಕಿಚ್ಚು ಬರಿಸುವ ಮಟ್ಟಿಗೆ ಹಾಸ್ಯ ಸುಲಲಿತವಾಗಿ ಮೂಡಿ ಬಂದಿದೆ. ಸಹಜವಾಗಿ ಈ ಸಂಚಿಕೆಯ ಎಲ್ಲ ಲೇಖಕರ ಬಗ್ಗೆ ಅಪರಂಜಿಗೆ ಹೆಮ್ಮೆ ಎನಿಸಿದ್ದರೆ, ಅದು ಕ್ಷಮಿಸಬಹುದಾದ ಸಂಗತಿ.

ಎಂಟು ವರುಷಕ್ಕೆ ನನ್ನ ಮಗ ದಂಟು ಅಂದ ಎಂಬಂತೆ, ಈಗ ಹನ್ನೆರಡು ವರ್ಷಕ್ಕೆ ನಮ್ಮ ಓದುಗರು ಸಂವಾದ ಪ್ರಾರಂಭಿಸಿದ್ದಾರೆ. ನಿಮ್ಮ ಪ್ರತಿಕ್ರಿಯೆಗೆ ತಕ್ಕಂತೆ ನಾವೂ ನಿಮ್ಮೊಂದಿಗೆ ಮಾತುಕತೆನಡೆಸುವುದರಲ್ಲಿ ಹಿಂದೆ ಬೀಳುವುದಿಲ್ಲ. ಈ ಸಂವಾದ ಒಂದು ಸ್ಥಿರ ಶೀರ್ಷಿಕೆಯಾಗಲಿ, ಅಪರಂಜಿಯ ಗುರಿಸಾಧನೆಗೆ ಒಂದು ಹೊಸ ಮಾರ್ಗ ಮೂಡಲಿ ಎಂದು ಹಾರೈಸುವೆ.

ಚೈತ್ರ-ಚಲುವು

ಅರುಣಾ

ಅಪರಂಜಿ-ಯುಗಾದಿ ಸಂಚಿಕೆ ಯುಗಾದಿ ಕಳೆದು ಒಂಭತ್ತು ದಿನಕ್ಕೆ ಅಂದರೆ, 'ಮಡಿಕೋಲು' ಮಲಗಿದ ದಿವಸವಾದ ಇಂದು ಕೈ ಸೇರಿತು. ಲೇಸಾದ ಗಿಡ್ಡ ಹೆಂಡತಿಯನ್ನೆತ್ತಿ ಮುದ್ದಿನಿಂದ ತೊಡೆಯ ಮೇಲಿರಿಸಿಕೊಂಡು ಪುಟ ಪುಟದ ನುಡಿಯನಾಲಿಸುತ್ತಾ ಕಣ್ಣರಳಿಸುತ್ತಾ ತುಟಿಯಂಚಿನಲ್ಲಿ ಮೂಡಿದ ನಗುವು ತುಟಿ ಮೀರುತ್ತಿದ್ದರೂ ಅಪರಂಜಿಯನ್ನು ಕೆಳಗಿರಿಸುವ ಮನ ಬರಲೇ ಇಲ್ಲ ನನ್ನವರಿಗೆ. ಗಿಡ್ಡ ಹೆಂಡತಿ ಲೇಸೆಂದು ತೊಡೆಯಮೇಲಿರಿಸಿಕೊಂಡೇ ನಿದ್ದೆ ಹೋದರು.

ಯುಗಾದಿ ಎಪ್ರಿಲ್ ತಿಂಗಳೆರಡೂ ಕೂಡಿ ಬಂದು ಯಾವುದು fool ಯಾವುದು full ಅಂತ ಮನೆಯಲ್ಲಿ ಮೈಲಾರಯ್ಯ ಸರಸು ಸಂಭಾಷಣೆ ನಡೆಯುತ್ತಿದ್ದಂತೆ. ಅಪರಂಜಿ ಕೈಸೇರಿ ಯುಗಾದಿ ಎಪ್ರಿಲ್ full ಅಂತ ತೀರ್ಮಾನಕ್ಕೆ ಬಂದೆವು.

"ಸಾಹಿತ್ಯ ಕೃಷಿ" ಓದುತ್ತಿದ್ದಂತೆ ನೆನಪಾಯಿತು. ನಂ ಲೆಕ್ಚರರೊಬ್ಬರು ಸ್ಟೂಡೆಂಟ್ಸು ಕ್ಲಾಸಿನಲ್ಲಿ ಗದ್ದಲ ಹಾಕಿದ್ದಾಗ ಹೇಳಿದ್ದು, "ಆಯ್. ಎಮ್. ಒನ್ ಯು ಆರ್ ಹಂಡ್ರೆಡ್, ಕಂಟ್ರೋಲ್ ಹ್ಯಾಂಗ್ ಕಂಟ್ರೋಲ್" ಅಂತ. ಲೇಖನ ಓದುತ್ತಿದ್ದಂತೆ ಮೂಡಿದ ಒಂದು ನಗುವಿನ ಅಲೆ ಮತ್ತೊಂದು ನೆನಪಿನ ಅಲೆಯನ್ನು ಎಬ್ಬಿಸಿ ನಗುವಿನ ನೂರು ಅಲೆಯನ್ನುಂಟು ಮಾಡಿತು. ಲೀಲಾ ಮಿರ್ಲೆಯವರೇನೊ ಕನ್ನಡಕ್ಕೆ ಪ್ರೀತಿಯಿಂದ ಗುದ್ದಿದ್ದಾರೆ, ಎಲ್ರೂ ಪ್ರೀತಿಯಿಂದ ಹೀಗೆಯೆ ಗುದ್ದಿದರೆ ಕನ್ನಡಮ್ಮ ನೆಟ್ಟಗಾಗೊದ್ರೆ ಅಂತ ಅಳುಕಾಯಿತು. ಕೇ. ಫ. ರ ಸಸ್ಪೆನ್ಸ್ ಅವರದ್ದೇ ಸರ್ಕಲ್‌ನ ಜೋಡಿ ಓದುಗರನ್ನು ಸೆಳೆದಿದೆ, ಅಂತೂ ಅವರ ಗ್ರೇವಿಟೇಶನ್ ಭರ್ಜರಿ ಇದೆ ಅಂದ್ಹಾಂಗಾಯಿ.

"ಬುಗುಡಿ ಒಡವೆಯಲ್ಲ ನೆಗಡಿ ಜಡ್ಡಲ್ಲ" ಎಂಬ ಗಾದೆಯನ್ನು ಅ. ರಾ. ಮಿತ್ರರು ಪುಷ್ಟೀಕರಿಸಿದ್ದಾರೆ, ಎಷ್ಟೆಂದ್ರೂ ಗಾದೆಯ ಮಾತು ವೇದಕ್ಕೆ ಸಮ ಅಲ್ಲವೇ. ತೇಜಸ್ವಿಯವರೊಂದಿಗಿನ 'ಮುಖಾಮುಖಿ' ನೂರಕ್ನೂರು, ನಂ ಕಂನಡದ ಕಲ್ಚರ್‌ಗೆ ಸೆಲ್ಯೂಟ್ ಹೊಡ್ದಂಗಿತ್ತು ಎಷ್ಟೆಂದ್ರೂ For God Sake Kannada in great.

ಮತ್ತೊಂದು "ಮೇಘ ಸಂದೇಶ" ಓದಿದಾಗ ಹಿಂದೆಲ್ಲೋ ಓದಿದ ಅ. ನ. ಸುಬ್ಬರಾಯರ 'ಮರೀಚಿಕಾ ದೂತ' ತಿಳಿಹಾಸ್ಯಬೆರೆತ ಸರಳಸುಂದರ ಹಾಸ್ಯಕವನ ನೆನಪಾಗಿ (ನಲ್ಲೆ, ನಾನಿಲ್ಲೆ ನೀನಲ್ಲೆ, ನನ್ನ ನಿನ್ನೊಳಗೆ ಜಗಳವಿನ್ನೆಲ್ಲಿ) ಮನಸ್ಸು ಮುದಗೊಂಡಿತು. ರಂಗ ವಿಲಾಸದ ಸಣ್ಣ ಕಾಮಣ್ಣನ ಪ್ರಶ್ನೆ, "ಅಲ್ಲಲೇ ರಂಗಣ್ಣನ ತಲೆ ಒಳಿಯಾತ್ರುದೈತೆ ? ಅವರು ಏನು ತಿನ್ತರೆ ? "ಗೆ "ತಿಂಗಳಿಗೊಮ್ಮೆ ಧರ್ಮಾವರ್ ನಲ್ಲಿ ಮೆಣಸಿನಕಾಯಿ ತರಿಸ್ಗಂಡು ತಿನ್ತರೆ. ಎಂಬ ಮಾತು ನಗು ಉಕ್ಕಿಸಿತು. ವಿಜಯಾ ಸಚ್ಚಿದಾನಂದರ 'ಆ ಕಾಲವೊಂದಿತ್ತು ದಿವ್ಯ ತಾನಾಗಿತ್ತು' ಮುತ್ತೈದೆಗೆ ಮೂಗುತಿ ಚೆಂದ ವೆನ್ನುವಂತೆ ಅಪರಂಜಿಯೊಳಗೆ ಎದ್ದು ಬಂದಿದೆ. ಶ್ರೀನಿವಾಸ ವೈದ್ಯರ 'ಶ್ರದ್ಧಾ' ಖರೆವಂದ್ರೂ ಒಂದ್ ಚಲೋ ಆರ್ಟಿಕಲ್, ಪಾತ್ರಕ್ಕೆ ಜೀವ ತುಂಬ್ಯಾರ. ಆ ಪಾತ್ರದಂಥ, ವ್ಯಕ್ತೀನ್ನ ನಾನ್ ನೋಡೀನಿ. ನೀವೂ ನೋಡಿರ್ಲಿಕ್ಕೆs ಬೇಕು ಏನಂತೀರಿ ?

ಕವನಗಳು, ವ್ಯಂಗ ಚಿತ್ರಗಳು ಕೆಲವೇ ಆದರೂ ನೆನಪಿನಲ್ಲಿ ಉಳಿಯುತಕ್ಕಂತಹ ವುಗಳಾಗಿವೆ. ಭಾವಚಿತ್ರಗಳಿಗೆ ಬರೆದ ಸಂಭಾಷಣೆಯಂತೂ ನಮ್ಮನ್ನು ಒಂದು ಕ್ಷಣ ಎಪ್ರಿಲ್ fool ಮಾಡಿತ್ತು ಅಂತನಲಿಕ್ಕೆ ಖುಷಿಯಾಗುತ್ತದೆ.

ಇಳೆಗೆ ಚೈತ್ರ ಬಂದಂತೆ ಈ ಬಾರಿ ಎಪ್ರಿಲ್ ಅಪರಂಜಿ A-1 ಆಗಿ ಮೈಕೆ ತುಂಬ್ಕೊಂಡು ಬನಬನದ ಹೂ ಮುಡಿದು ನರುಗಂಪ ಸಿರಿ ಹೊತ್ತು ತಿಳಿಹಾಸ್ಯ ಹಂಚಲಿಕ್ಕೆ ಹೊರಟಂತಿದೆ. ನಾನು ಮನದಲ್ಲಿ ಅಪರಂಜಿ ನೆನೆದು ನಕ್ಕರೆ, ಮಕ್ಕಳು ಅಮ್ಮಾ ಯಾಕೆ ನಗ್ತೀ ಎಂದರೆ, ನಮ್ಮವರು ಸ್ವಲ್ಪ ಇವಳ ಸ್ಕ್ರೂ ಸಡ್ಲಾದಂತಿದೆ ಎನ್ನುತ್ತ ತುಂಟ ನಗೆ ಚೆಲ್ಲುತ್ತಿದ್ದಾರೆ,.........ಬರಲೇ ? !.

ಸಮ ಅಕ್ಷಮ

(ಉಗಾದಿ ಅಪರಂಜಿ ಲೇಖಕರ ಕ್ಷಮೆಕೋರಿ)

ಪ್ರಭಾ

......"ತಮ್ಮ ಬಳಿಗೆ ಬಂದ ಸಮಸ್ತವನ್ನೂ ನುಂಗಿ ಯಾವ ರೀತಿಯಲ್ಲೂ ಪ್ರತಿ ಕ್ರಿಯೆ ತೋರದ ಕಪ್ಪು ಅಂತರಾಳಗಳು (Black hole ವಿಶ್ವದ ನಿಗೂಢ ಮೂಲೆ ಯಲ್ಲಿ ಕಂಡು ಬರುತ್ತವಂತೆ, ನಮ್ಮ ಅಪರಂಜಿಯ ಓದುಗರು ಈ ಬ್ಲಾಕ್ ಹೋಲ್‌ನ ವಂಶಜರು ಎಂದು ಈಗ ಮನವರಿಕೆಯಾಗಿದೆ. ಯಾವುದೇ ಪ್ರಯೋಗ ಮಾಡಲಿ

ಅವರ ಬಗ್ಗೆ ಪ್ರತಿಕ್ರಿಯಿಸುವುದು ಅಸಭ್ಯವರ್ತನೆ ಎಂದು ನಮ್ಮ ಓದುಗರು ತಿಳಿದಿರುವಂತಿವೆ ಹಾಗೆ ತಿಳಿಯಬೇಡಿ......" —ಅಪರಂಜಿ

ಅಪರಂಜಿಯು ಮೇಲಿನ ನಮ್ರವಾದ ಬಿನ್ನಹದಿಂದ ಅಪರಂಜಿ ಓದುಗರಾದ ನನಗೆ ಮುಜುಗರವಾಗಿದೆ. ಗರಬಡಿದ ಹಾಗೆ ಆಗಿ ಅಪರಂಜಿ ದೀಪಾವಳಿ ಸಂಚಿಕೆಯನ್ನ ಅಲ್ಲಲ್ಲ ಸಾರಿ ಯುಗಾದಿ ಸಂಚಿಕೆಯನ್ನ ಮೊದಲಿಂದ ಕೊನೆವರೆಗೆ ಕೊನೆಯಿಂದ ಮೊದಲವರೆಗೆ ಎರಡೆರಡುಬಾರಿ ತಿರುವುಹಾಕಿ ದಿಂಬಿನ ಪಕ್ಕ ಇರಿಸಿಕೊಂಡಿದ್ದೀನಿ. ಲೇಖಕನ ವ್ಯಕ್ತಿತ್ವದ ಹಾಗೂ ಪ್ರಜ್ಞೆಯ ಎಲ್ಲಾ ಅಂಶಗಳೂ ಸಾಹಿತ್ಯದಲ್ಲಿ ಹೊರಹೊಮ್ಮಬೇಕು. ಹಾಸ್ಯ ಕೇವಲ ಜೀವನ ದೃಷ್ಟಿಯಲ್ಲಿರಬೇಕೇ ಹೊರತು ಉದ್ದೇಶಪೂರ್ವಕವಾಗಲ್ಲ. ಎಂದು ಅಪರಂಜಿ ಹೇಳಿದ್ದಾಳೆ.

ಅಪರಂಜಿಯು ಈ ಪ್ರಯೋಗ ಎಷ್ಟರಮಟ್ಟಿಗೆ ಸಫಲವಾಗಿದೆ ಎಂದೇ ಅಪರಂಜಿಯನ್ನ ಎರಡುಸಲ ತಿರುವಿ ಹಾಕಿದ್ದು. ಈ ದೃಷ್ಟಿಯಲ್ಲಿ ಅಪರಂಜಿ ಶೇಕಡ ಐವತ್ತರಷ್ಟು ಸಫಲವಾಗಿದ್ದಾಳೆ ಎಂದು ನನ್ನ ಅನಿಸಿಕೆ. ಈ ಸಫಲತೆ ಸಾಹಿತ್ಯ ಕೃಷಿ ಅಂ ಶರಣ ಅವರ ಲೇಖನದಲ್ಲಿ ಎದ್ದು ಕಾಣುತ್ತೆ ಸಂತೆಯಲ್ಲೊಂದು ಮನೆ, ಸಭಾಪತಿಯ ಫಜೀತಿ ಸ್ಕೈಯರ್ ಆಲಿಸೂಟು ಮುಂತಾದ ಲೇಖನಗಳು ಹಾಸ್ಯ ಲೇಖನಗಳು ಮೆಲ್ಲಗೆ ಮೇಲಿನ ಲೇಖನವನ್ನು ಹಿಂಬಾಲಿಸುತ್ತವೆ.

ಮಿಕ್ಕಂತೆ ಭುವನೇಶ್ವರಿ ಹೆಗಡೆ ಅವರ ಹಾಸ್ಯಬರೆಹ ಅದೇಕೊ ಮನಸ್ಸಿಗೆ ನಾಟುವುದರಲ್ಲಿ ತಪ್ಪಿದೆ. ಹಾಗೇ ಮುಖಾ ಮುಖಾ ಸಹ. ಮಿಕ್ಕಂತೆ ಕೇಫ ರ ಲೇಖನ ಅರಾಸೇ ಅವರ ಬರಹ ಎರಡೆರಡು ಸಲ ಓದಿ ಇವತ್ತು ಓದಿ ನಾಳೆ ನಗುವಂತಹವುಗಳು

ಮುಖಾ ಮುಖಿ ಹಾಸ್ಯಲೇಖನ ಇರಲಾರದು ಎಂದು ನಂಬಿದ್ದೇನೆ !

ಮುಖಾ ಮುಖಿಗೆ ಬದಲು ತೇಜಸ್ವಿಯವರಿಂದಲೇ ಒಂದು ಲೇಖನ ಪಡೆಯಬಹುದಿತ್ತು. : ಇಲ್ಲವಾದಲ್ಲಿ ಇದನ್ನೇ ಒಂದು ಹ್ಯೂಮರ್ ಮಾಡಬಹುದಿತು !

ಓಂ ಪ್ರಕಾಶರ ಹನ್ರಿ ರೀ ಪ್ರಿಂಟ್ ಈಗಾಗಲೇ ಕೆಲವು ಕಡೆ ಬೇರೆಬೇರೆಯವರು ಬರೆದಿದಾರೆ. ಅದೇ ತರಹವೇ ಗಿಡ್ಡ ಹೆಂಡತಿಯರ ಮೆಲಿನ ಲೇಖನವೂ.ಗಿಡ್ಡ ಗಂಡ, ಗಿಡ್ಡ ಹೆಂಡತಿಯಾಗಿರುವ್ವದು ಒಂದೇ ಇಲ್ಲಿನ ವಿಶೇಷ !

ಮತ್ತೊಂದು ಮೇಘ ಸಂದೇಶ, ನೆಗಡಿ ಓದಿಸಿಗೊಂಡು ಹೋದರೂ ಇಲ್ಲಿನ ಸಂಗತಿಗಳನ್ನ ಎಲ್ಲೋ ಓದಿರುವ ಭಾಸವಾಗುತ್ತದೆ. ಬನ್ನಿ ಫೊಟೋಗ್ಹೋಗೋಣ. ಮೊಸರನ್ನದ ಮಧ್ಯಸ್ಥಿಕೆ ತಲೆಗೆ ಕಸರತ್ತು ನೀಡದ ತಿಳಿಬರಹಗಳಾದರೆ ಶ್ರದ್ಧಾ (ಇದು ಶ್ರದ್ಧಾ ಇರಬೇಕಿತ್ತೇ ?) ಮೂಲಕ ಶಿನೂ ಅವರ ವ್ಯಕ್ತಿಚಿತ್ರಣದ ಅಪೂರ್ವ ವೈಖರಿ ಎಕ್ಸ್ ಪೋಸ್ ಆಗಿದೆ. ಉದ್ಯೋಗಾರಣ್ಯಕ-95 ಅಕಾಲವೊಂದಿತ್ತು. ವರನಿಗೆ ಕಿವಿಮಾತು-ಮೂರೂ ವಿಬಿನ್ನವಾದ ಲೇಖನಗಳು ಮೊದಲನೆಯದರಲ್ಲಿ ವಿಡಂಬನೆ ವಿಜೃಂಭಿಸಿದ್ದರೆ ಎರಡನೆಯದರಲ್ಲಿ ಕೆಲವು ನೆನಪುಗಳು ನವರತ್ನ ರಾಮರಾವ್)ಕಾಲದ ಒಂದು ಲವ್ ಅಫೇರ್ ಲವಲವಿಕೆಯಿಂದ ಚಿತ್ರಿತವಾಗಿದ್ದು ವರನಿಗೆ ಕಿವಿಮಾತು. ಯಾವುದೇ ಹಳೇ ಜೋಕೊಂದರ ರೀಪಿಟ್ ಪರ್‌ಫಾರ್ಮೆನ್ಸ್‌ಥರಹ ಅನಿಸಿತು. ಆದರೂ ಅಪರಂಜಿಯ ಉಗಾದಿ ವಿಶೇಷಾಂಕ ಓದುತ್ತಾ ಹೋದಂತೆ ಮನಸ್ಸಿನಲ್ಲಿನ ಬಿಗುವನ್ನು ಕಡಿಮೆ ಮಾಡುವಲ್ಲಿ, ಮೀಸೆಯ ತುದಿಯಲ್ಲಿ ನಗುವನ್ನು ಮೂಡಿಸುವಲ್ಲಿ ಮತ್ತು ನಿರಾಳದಾದಂತಹ ಮನೋಭಾವ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಹಾಸ್ಯ ಬರೆಹಗಳ ಮುಖ್ಯ ಉದ್ದೇಶವಾದರೊ ಅದೇ ತಾನೇ ?

"ಅಪರಂಜಿ" ಓದುಗರಿಗೆ ಮತ್ತು ಲೇಖಕರಿಗೆ ಮೊದಲೇ "ಎಚ್ಚರಿಕೆ" ನೀಡಿ, ಲೇಖನಗಳನ್ನು "ಓಪನ್" ಆಗಿ ಆಹ್ವಾನಿಸಿ, ಅವುಗಳಲ್ಲಿ ಉತ್ತಮವಾದದನ್ನು ಆಯ್ಕೆ ಮಾಡಿ,.........ಹೋಗಲಿ ಬಿಡಿ ಈ ವಿಷಯ ಯಾಕೆ ?

ಮೇಲಿನ ಅಭಿಪ್ರಾಯಗಳು ತುಂಬಾ ಲೈಟರ್ ವೆಯ್ನ ನಲ್ಲೇ ಬರೆದದ್ದು "ಆದ್ದರಿಂದ ಯಾರೂ ತಪ್ಪು ತಿಳಿಯದಿರಲಿ ! Black hole ನಿಂದ at least ಒಬ್ಬ ಓದುಗ ಆಚೆ ಬಂದ ಸಂತೋಷ ಮತ್ತು ಸಂತೃಪ್ತಿ ಅಪರಂಜಿಗೆ ಲಬಿಸಲಿ ಮತ್ತೂ ಹೊಸ ಹೊಸ ಪ್ರತಿಭೆಗಳು ವಿಜೃಂಭಿಸಲಿ !!

ಪ್ರಿಯ ಓದುಗರೇ

ಪ್ರೇಕ್ಷಕ : ಒಬ್ಬ ತರುಣೀನ ಅರ್ಧಕ್ಕೆ ಕತ್ತರಿಸೋ ಮ್ಯಾಜಿಕ್‌ನ ನೀವು ಮಾಡ್ತಾನೇ ಇಲ್ವಲ್ಲ ?

ಜಾದುಗಾರ : ಆ ತರುಣಿ ಮಂಡ್ಯ, ಹೊಸೂರಿಗೆ ಹೊರಟು ಹೋದ್ಲು ರೀ

ಸಾಲೆಣ್ಣೆಮಬೆ


ಬಾಲ್ನೆಂದು

ಪ್ರತನೋಲ್

ಡಾಷುತ್ರಿಎ

ಎಲ್ಲಾರಿಗೂ ಗಾಬರಿ-ಡ್ರೈವರ್

ಹೊರಡುವಾಗ ಮಾಡಿದರೆ ಹೇಗೆ?



ನರಿ ಮತ್ತು ದ್ರಾಕ್ಷಿ ಗಿಡ

–ನಂದಿನಿ ಕಾಪಡಿ

ಮತ್ತೆ ಮತ್ತೆ ಅದೇ ಹಳೇ ಕಗ್ಗ ಅಂತ ಓದದೇ ಇರಬೇಡಿ ! ಇದು ಹಳೆಯ ಕಥೆಯಿರಬಹುದು. ಆದರೆ ಈ ಶತಮಾನಕ್ಕೆ ಅಳವಡಿಸಿಕೊಳ್ಳಲು ಸಾಧ್ಯವೇಕಿಲ್ಲ ?

ನರಿಯೊಂದು ಊರ ಹತ್ತಿರ ಬಂದಿತು. ದೂರದಲ್ಲೊಂದು ಕಲ್ಲಿನ ಕಂಬಕ್ಕೆ ದ್ರಾಕ್ಷಿ ಬಳ್ಳಿಯೊಂದು ಹಬ್ಬಿ ಕೊಂಡು ನಿಂತಿತ್ತು.ನಾಲ್ಕಾರು ದ್ರಾಕ್ಷಿ ಗೊಂಚಲುಗಳು ಮೇಲಿನಿಂದ ತೂಗುತ್ತಿದ್ದವು. ನರಿಗೆ ಬಾಯಲ್ಲಿ ನೀರೂರಿತು. ಬಳ್ಳಿಯ ಹತ್ತಿರ ಹೋಗಿ,

ಒಂದು ಸಲ ನೆಗೆಯಿತು;
ದ್ರಾಕ್ಷಿ ಸಿಕ್ಕಲಿಲ್ಲ.
ಎರಡನೆಯ ಸಲ ನೆಗೆಯಿತು ;
ದ್ರಾಕ್ಷಿ ಸಿಕ್ಕಲಿಲ್ಲ.
ಮೂರನೆಯ ಸಲ ನೆಗೆಯಿತು ;
ದ್ರಾಕ್ಷಿ ಸಿಕ್ಕಲಿಲ್ಲ.

ಇನ್ನೊಂದು ಪ್ರಯತ್ನ ಮಾಡೇ ಬಿಡೋಣವೆಂದು ಕೊಂಡು ನಾಲ್ಕನೆಯ ಸಲ ನೆಗೆಯಿತು ; ದ್ರಾಕ್ಷಿ ಸಿಕ್ಕಲಿಲ್ಲ.

"ಥೂ ಈ ದ್ರಾಕ್ಷಿ ಹುಳಿಯಿರಬೇಕು" ಎಂದು ಕೊಂಡದ್ದೇ ನರಿ, ಊರಿನ ಒಳಗೆ ಹೋಯಿತು.

ಪೇಟೆ ಬೀದಿ ತನಕ ನಡೆದು ಕೊಂಡು ಬಂದಿತು. ಮೂಲೆಯಲ್ಲೇ ದ್ರಾಕ್ಷಿ ಹಣ್ಣು ಮಾರುವವನು, ತನ್ನ ಗಾಡಿಯ ತುಂಬಾ ಗೊಂಚಲುಗಳನ್ನು ಪೇರಿಸಿಕೊಂಡು ನಿಂತಿದ್ದನು. ನರಿಯ ಬಾಯಲ್ಲಿ ಮತ್ತೆ ನೀರೂರಿತು. ಗಾಡಿಯ ಹತ್ತಿರ ಹೋಗಿ, ಯಾವ ಗೊಂಚಲು ಹೆಚ್ಚು ಸಿಹಿ ಎಂದು, ಒಂದೊಂದೇ ಹಣ್ಣು ಕಿತ್ತು ರುಚಿ ನೋಡಿತು. ಕಡೆಗೆ ಎಲ್ಲದಕ್ಕಿಂತ ಸಿಹಿಯಾದ ಗೊಂಚಲು ಆರಿಸಿ, ಹಣ್ಣು ಮಾರುವವನ್ನು "ಬೆಲೆ ಎಷ್ಟು?" ಎಂದು ಜೋರಾಗಿ ಕೇಳಿತು. "ಕೆ.ಜಿ.ಗೆ ಇಪ್ಪತ್ತು ರೂಪಾಯಿ" ಎಂದ ಹಣ್ಣಿನವನು. ನರಿ ದ್ರಾಕ್ಷಿ ತೂಗಿಸಿ, ಇಪ್ಪತ್ತರ ನೋಟನ್ನು ಹಣ್ಣಿನವನತ್ತ ಬಿಸಾಕಿತು. ಆಮೇಲೆ "ತೂ ಚೀಜ್ ಬಡೀ ಹೈ ಮಸ್ತ್ ಮಸ್ತ್" ಎಂದು ಹಾಡುತ್ತಾ ಹಣ್ಣನ್ನು ತಿನ್ನುತ್ತಾ ಹೋಯಿತು.........

ಕಥೆ ಇಲ್ಲಿಗೆ ಮುಗಿಯಲಿಲ್ಲ... ಇನ್ನೂ ಇದೆ... ಇನ್ನೊಂದು ನರಿ ಬಂದಿತು. ಕಲ್ಲಿನ ಕಂಬಕ್ಕೆ ಹಬ್ಬಿದ್ದ ದ್ರಾಕ್ಷಿ ಬಳ್ಳಿ ನೋಡಿ, ಬಾಯಿ ನೀರೂರಿಸಿ ಕೊಂಡು ಗೊಂಚಲಿನತ್ತ ಜಿಗಿಯಿತು. ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು, ಎಂಟು, ಒಂಬತ್ತು ಮತ್ತು ಹತ್ತು ಬಾರಿ ನೆಗೆ ನೆಗೆದಿತು, ಎಗ ಎಗರಿತು. ಜಿಗಿ ಜಿಗಿಯಿತು. ಕಡೆಗೂ ಹನ್ನೊಂದನೆಯ ಪ್ರಯತ್ನಕ್ಕೆ ಅದಕ್ಕೆ ಯಶಸ್ಸು ಪ್ರಾಪ್ತಿಯಾಗಿ, ದ್ರಾಕ್ಷಿ ಹಣ್ಣುಗಳು ಅದರ ಬಾಯಿಗೇ ಬಂದು ಬಿದ್ದವು ! ನರಿಯ ಮುಖ ಕೆಟ್ಟದಾಯಿತು. ಏಕೆಂದರೆ ದ್ರಾಕ್ಷಿ ಹುಳಿ ಹುಳಿಯಾಗಿತ್ತು !

॥ಸತಿ ಸುಪ್ರಭಾತ॥

ವೈ. ಎಸ್. ಕೃಷ್ಣಮೂರ್ತಿ

ಏಳಯ್ಯ ಸ್ವಾಮೀ ಓ ಪತಿರಾಯ
ಹಾಲಿನ್ನು ಬರಲಿಲ್ಲ ಎದ್ದು ನೋಡಯ್ಯ
ಕಾಫೀಗೆ ಕಾತರಿಸಿದೆ ಮನವು ಕೇಳಯ್ಯ
ಬೂತಿನ ಕಡೆಗೆ ಹೆಜ್ಜೆ ಇರಿಸಯ್ಯ॥

ಏಳಯ್ಯ ಸ್ವಾಮಿ ಓ ಪತಿರಾಯ
ಮುಸುಕನ್ನು ಸರಿಸಿ ಎದ್ದು ಬಾರಯ್ಯ
ನಲ್ಲೀಲಿ ನೀರಿಲ್ಲ ಬೋರು ಹುಡುಕಯ್ಯ
ಬೋರಿಂದ ನೀರನ್ನು ಹೊತ್ತು ತಾರಯ್ಯ॥

ಹಾಸಿಗೆಯ ಸುತ್ತಿಟ್ಟು ಎತ್ತು ಬಾರಯ್ಯ
ಕಸ ಪರಕೆ ಹಿಡಿದು ಕಸ ಗುಡಿಸಯ್ಯ
ಮನೆಮುಂದೆ ಸಾರಿಸಿ ರಂಗೋಲಿ ಇಟ್ಟು
ಬಿಸಿ ನೀರ ಕಾಯಿಸು ನೀ ಜಳಕಕ್ಕಾಗಿ॥

ಫಲಹಾರವನ್ನು ಸಿದ್ಧಗೊಳಿಸಯ್ಯ
ತರಕಾರಿ ಇದೆಯೇ ಇಣುಕಿನೋಡಯ್ಯ
ಇಲ್ಲದಿರೆ ಬಜಾರು ಕಡೆಗೆ ಓಡಯ್ಯ
ಅಡಿಗೆಗೆ ಕುಕ್ಕರು ಕುಕ್ಕು ಬಾರಯ್ಯ॥

ಮಕ್ಕಳನು ಎಬ್ಬಿಸಿ ಜಳಕವನು ಮಾಡಿಸಿ
ಸಮವಸ್ತ್ರ ತೊಡಿಸಿ ಚೀಲವನು ಹೊರಿಸಿ
ಶಾಲೆಗೆ ಹೊರಡಿಸುವ ವೇಳೆಯಾಯ್ತಯ್ಯ
ಬೇಗನೆ ಎದ್ದೇಳು ಓ ನನ್ನ ಇನಿಯ॥

ಎಷ್ಟೊಂದು ಮನೆ ಕೆಲಸ ಕಾದಿಹವು ನಿನಗೆ
ಮುಸುಕೊಳಗೆ ಮುದುಡುವುದು ಇನ್ನೂ ಹಿತವೇ
ಸುಮ್ಮನೇ ಪವಡಿಸುವುದು ನಿನಗೆ ತರವೇ
ದಿನ ನಿತ್ಯ ಹಾಡುವೆನು ಈ ಸುಪ್ರಭಾತ॥

ಸರ್ ದಾರ್ ಜಿ ಜೋಕ್ ಮತ್ತು ನಾನು

-ನಾಚಿ

ಮೊನ್ನೆ ಕಿಟ್ಟಿ ಮಗಳ ಮಗಳ ಮದುವೆಗೆ ಛತ್ರಕ್ಕೆ ಹೋಗಿದ್ದೆ. ಧಾರೆ ಮುಗಿದು ಎಲ್ಲರೂ ಊಟಕ್ಕೆ ಕಾಯ್ತಾ ಇದ್ರು. ಮೂಲೆಯಲ್ಲಿ ಒಂದು ಗುಂಪಿನಿಂದ ನಗು ಜೋರಾಗಿ ಕೇಳಿಸ್ತಿತ್ತು. ಯಾರು ಇಷ್ಟು ನಗಸ್ತಿರೋರು ಅಂತ ಹೋದ್ರೆ, ಶೀನು ! ಸರ್ದಾರ್ ಜಿ ಜೋಕ್ಸ್ ಬೇಕಾದಷ್ಟು ಗೊತ್ತಿದೆ ಇವನಿಗೆ, ನನ್ನ ಕಂಡು ಬಾರೊ, ಲೇಟೆಸ್ಟ್ ಸರ್ದಾರ್ ಜಿ ಜೋಕ್ ಹೇಳ್ತಿನಿ ಕೇಳು ಅಂದು ಷುರುಮಾಡಿದ,

ಒಂದ್ಸಲ ಒಬ್ಬ ಸರ್ದಾರ್ ಜಿ ಮದ್ರಾಸಿಂದ ಡೆಲ್ಲಿಗೆ G. T. ನಲ್ಲಿ ಬೆಳಗ್ಗೆ 8ಕ್ಕೆ ಹೊರಡಬೇಕಾಯ್ತು. ಎದ್ದದ್ದು ಲೇಟಾಗಿ, ನಾಷ್ಟಾನೂ ಮಾಡದೆ ಸೀದಾ ಸ್ಟೇಷನ್‌ಗೆ ಓಡಿದ. ರೈಲು ಆಗತಾನೇ ಹೊರಡ್ತಾ ಇತ್ತು. ಓಡಿ ಹೋಗಿ ಕೊನೇ ಬೋಗಿ ಹಿಡಿದು ಉಸ್ಸಪ್ಪಾ ಅಂತ ಕೂತ. ನಾಷ್ಟ ಇಲ್ಲದೇ ಹೊಟ್ಟೆ ಚುರುಗುಟ್ತಾ ಇತ್ತು. ಮುಂದಿನ ಸ್ಟೇಷನ್‌ನಲ್ಲಿ ಏನಾದರೂ ತೊಗೊಳ್ಳಲೇಬೇಕು ಅಂತ ಕಾಯ್ತಾ ಇದ್ದ. ಆದ್ರೆ ಮೊದಲನೇ ಹಾಲ್ಟ್ ಬಂದದ್ದೇ 10 ಗಂಟೆಗೆ, ಗೂಡೂರಿನಲ್ಲಿ. ಸದಾರ್‌ಜಿದು ಕೊನೇ ಬೋಗಿ, ಪ್ಲಾಟ್ ಫಾರಂ ಆಚೆ ಬಲುದೂರದಲ್ಲಿತ್ತು. ಇಡ್ಲಿ ವಡೆಯೋರು ಕೂಗೋದು ಕೇಳಿಸ್ತಿತ್ತು ಸರ್ದಾರ್‌ಜೀಗೆ, ಆದರೆ ಯಾರೂ ಕೊನೇ ಬೋಗಿನವರೆಗೆ ಬರ್ತಾನೇ ಇರಲಿಲ್ಲ. ಇಳಿದು ಹೋಗಿ ತೊಗೊಳ್ಳೊಕ್ಕೆ ಸಮಯವಿಲ್ಲ. ಸರ್ದಾರ್ ಜೀಗೆ, ಉದ್ದಕ್ಕೂ ಹೀಗೆ ಆಗಿ ವಿಪರೀತ ಕೋಪ ಬಂತು. ಡೆಲ್ಲಿಯಲ್ಲಿ ಇಳಿದು ಮನೆಗೆ ಹೋದವನೇ ರೈಲ್ವೇ ಜನರಲ್ ಮ್ಯಾನೇಜರ್‌ಗೆ ಕಾಗದ ಬರೆದು, ಕೊನೆಯಲ್ಲಿ–G. T. ನಲ್ಲಿ ಕೊನೇ ಬೋಗಿ ಇರಲೇ ಕೂಡದು, ಇದ್ದರೂ ಅದು ಮಧ್ಯದಲ್ಲಿ ಇರಬೇಕು ಅಂತ ಸಲಹೆ ಮಾಡಿದ.

ಇಂಥಾ ಒಳ್ಳೇ ಜೋಕನ್ನ ನಾನು ಹೇಳೋ ಅವಕಾಶ ಬೇಗನೇ ಸಿಕ್ತು. ಇನ್ನೊಂದು ಮದುವೆ ಮನೇಲಿ ನಾನು, ಗುಂಡ, ರಾಮು ಎಲ್ರೂ ಸೇರಿದ್ವು, ಧಾರೆ ಆಗಿ ಊಟಕ್ಕೆ ಕಾಯ್ತಾ ಇದ್ದೆವು. ಊಟಕ್ಕೆ ಇನ್ನೂ ಟೈಂ ಇದೆಯಂತೆ ಅಲ್ಲೀವರೆಗೂ ಒಳ್ಳೆ ಸರದಾರ್ ಜಿ ಜೋಕ್ ಹೇಳ್ತೀನಿ ಕೇಳಿ ಅಂತ ಷುರು ಮಾಡಿದೆ.

"ಒಂದ್ಸಲ ಒಬ್ಬ ಸರದಾರ್‌ಜಿ ಮದ್ರಾಸಿಂದ ಡೆಲ್ಲಿಗೆ G. T. ನಲ್ಲಿ ಬೆಳಗ್ಗೆ 8ಕ್ಕೆ ಹೊರಡಬೇಕಾಯ್ತು, ಎದ್ದದ್ದು ಲೇಟಾಗಿ, ನಾಷ್ಟಾನೂ ಮಾಡದೆ ಸೀದಾ ಸ್ಟೇಷನ್‌ಗೆ ಓಡಿದ.........

ತಕ್ಷಣ ಗುಂಡ ಇದ್ದೋನು "ತಾಳು ತಾಳು ಏನು ಹೇಳ್ದಿ? ಮದ್ರಾಸಿಂದ ಡೆಲ್ಲಿಗೆ G. T. ಸಲ್ವಾ? G. T. ಬೆಳಿಗ್ಗೆ ಹೋಗೋಲ್ಲ. ರಾತ್ರಿ 10-15ಕ್ಕೆ ಅದು ಹೊರಡೋದು"

"ಮತ್ತೆ ನೀನು ಹಾಗೆ ಹೇಳಿದನಲ್ಲ" ಅಂದೆ

"ಸರಿ ಸರಿ, ನೀನುಗೇನು ಗೊತ್ತೊ? ನಾನು ರೈಲ್ವೇನಲ್ಲೇ ಇರೋನು ನಾನು ಹೇಳ್ತಿನಿ ಕೇಳು, G. T. ಹೊರಡೋದು ರಾತ್ರಿ 10-15ಕ್ಕೆ ಬೆಳಿಗ್ಗೆ 8ಕ್ಕೆ ಹೊರಡೋದು ಹೌರಾ ಎಕ್ಸ್ ಪ್ರೆಸ್, ಕಲ್ಕತ್ತಕ್ಕೆ"

"ಸರಿ ಅದೇ ಇರಬೇಕು ಅಂದು ಮತ್ತೆ ಷುರುಮಾಡಿದೆ ಮೊದಲಿಂದ "ಒಂದ್ಸಲ ಒಬ್ಬ ಸರದಾರ್ ಜಿ ಮದ್ರಾಸಿಂದ ಕಲ್ಕತ್ತಕ್ಕೆ ಹೌರಾ ಎಕ್ಸ್‌ಪ್ರೆಸ್‌ನಲ್ಲಿ ಬೆಳಿಗ್ಗೆ 8ಕ್ಕೆ ಹೋರಡಬೇಕಾಗಿತ್ತು. ಎದ್ದದ್ದು ಲೇಟಾಗಿ ನಾಷ್ಟಾನೂ ಮಾಡದೆ ಸೀದಾಸ್ಟೇರ್ಷಗೆ ಓಡಿದ.........ಹೊಟ್ಟೆ ಚುರುಗುಟ್ತಾ ಇತ್ತು. ಮುಂದಿನ ಸ್ಟೇಷನಲ್ಲಿ ಏನಾದರೂ ತೊಗೊಳ್ಳಲೇ ಬೇಕು ಅಂತ ಕಾಯ್ತಾ ಇದ್ದ. ಆದ್ರೆ ಮೊದಲನೇ ಹಾಲ್ಟ್ ಬಂದದ್ದೇ ಬೆಳಿಗ್ಗೆ 10ಕ್ಕೆ ಗೂಡೂರಿನಲ್ಲಿ.........

ಗುಂಡ ಮತ್ತೆ ಬಾಯಿ ಹಾಕಿದ "ತಪ್ಪು ತಪ್ಪು ಹೇಳ್ಬೇಡ ನೀನು, ಹೌರಾ ಎಕ್ಸ್‌ಪ್ರೆಸ್ ಗೂಡೂರಿನಲ್ಲಿ ನಿಲ್ಲೋದೇ ಇಲ್ಲ. ಅದು ನಿಲ್ಲೋದು ವಿಜಯವಾಡ ದಲ್ಲೇ" ಮತ್ತೆ ಮೊದಲಿಂದ ಷುರುಮಾಡಬೇಕಾಯ್ತು, "ಒಂದ್ಸಲ ಒಬ್ಬ ಸರದಾರ ಜಿ.........ಮೊದಲನೇ ಹಾಲ್ಟ್ ಬಂದದ್ದೇ ಬೆಳಿಗ್ಗೆ 10ಕ್ಕೆ ವಿಜಯವಾಡದಲ್ಲಿ. ನಾಷ್ಟಕ್ಕಾ ಕಾಯ್ತಿದ್ದ ಸರದಾರ್ ಜಿ.........

ಮತ್ತೆ ಗುಂಡ ಬಾಯಿಹಾಕಿ "ಹೌರಾ ಎಕ್ಸ್‌ಪ್ರೆಸ್‌ನಲ್ಲಿ Catering Service ಇದೆ. ಎಲ್ಲಾ ಬೋಗಿಗೂ ಬೆಳಗಿನಿಂದಲೇ ನಾಷ್ಟ ಕೊಡೋಕ್ಕೆ ಷುರುಮಾಡ್ತಾರೆ, ಗೊತ್ತಾ" ಅಂದ

ಇಷ್ಟು ಹೊತ್ತಿಗೆ ಸದ್ಯ ಯಾರೋ ಬಂದು ಊಟರೆಡಿಯಾಗಿದೆ ಬನ್ನಿ ಅಂದ್ರು. ಎಲ್ಲಾ ಊಟಕ್ಕೆ ಓಡಿದರು. ನಾನು ಜೋಕಿನಿಂದ ಪಾರಾದೆ.

ಇದಾದ ಸ್ವಲ್ಪ ದಿನಗಳಾದ ಮೇಲೆ ರಾವ್ ನನ್ನ ಊಟಕ್ಕೆ ಕರೆದಿದ್ದ. ಭಟ್ಟ, ಉಪಾಧ್ಯನೂ ಬಂದಿದ್ದರು. ಊಟ ಆಗಿ ಮಾತಾಡ್ತಾ ಇದ್ದೆವು. ಮಾತು ಬರೀ ರಾಜಕೀಯದ್ದೇ ಆಗಿ ನನಗೆ ಬೋರ್ ಆಗ್ತಾ ಇತ್ತು. ರೈಲ್ವೇಯವರು ಯಾರೂ ಇಲ್ಲ ಅಂತ ಖಾತ್ರಿ ಮಾಡಿಕೊಂಡು ಹೇಳಿದೆ "ಒಂದು ಸರದಾರ್ ಜಿ ಜೋಕ್ ಹೇಳ್ತೀನಿ ಕೇಳಿ ಅಂದು ಶುರು ಮಾಡಿದೆ.

"ಒಂದ್ಸಲ ಒಬ್ಬ ಸರ್‌ದಾರ್ ಜಿ ಮದ್ರಾಸಿಂದ ಕಲ್ಕತ್ತಕ್ಕೆ ಬೆಳಿಗ್ಗೆ 8ಕ್ಕೆ ಹೌರಾ ಎಕ್ಸ್‌ಪ್ರೆಸ್‌ನಲ್ಲಿ ಹೊರಡಬೇಕಾಗಿತ್ತು.........

ಯಾರೂ ಅಡ್ಡಬಾಯಿ ಹಾಕಲಿಲ್ಲ ಸದ್ಯ, ಕೊನೇಗೆ ಪಂಚ್‌ಲೈನಿಗೆ ಬಂದೆ. "ಸರ್‌ದಾರ ಜಿ ಕಲ್ಕತ್ತಾದಲ್ಲಿ ಇಳಿದು ಮನೆಗೆ ಹೋದವನೇ ರೈಲ್ವೇ ಜನರಲ್ ಮ್ಯಾನೇಜರ್‌ಗೆ ಕಾಗದ ಬರೆದು ಕೊನೆಯಲ್ಲಿ ಸಲಹೆ ಮಾಡಿದ–ಹೌರಾ ಎಕ್ಸ್‌ಪ್ರೆಸ್ ನಲ್ಲಿ ಕೊನೇ ಬೋಗಿ ಇರಲೇ ಕೂಡದು. ಇದ್ದರೂ ಅದು ಮಧ್ಯಡಲ್ಲೇ ಇರಬೇಕು ಅಂತ" ಪಂಚ್‌ಲೈನ್ ಹೇಳಿ ಮುಗಿಸಿದೆ. ರಾವ್, ಭಟ್ಟ, ಉಪಾಧ್ಯ ಎಲ್ಲರೂ ಮೌನ ವಾಗಿ ಯೋಚನೆ ಮಾಡೊಕ್ಕೆ ಷುರು ಮಾಡಿದರು, ಒಬ್ಬನೂ ನಗಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಉಪಾಧ್ಯ ಹೇಳಿದ"ಒಳ್ಳೇ Puzzle ಕೊಟ್ರಲ್ಲ ನಮಗೆ, ಕೊನೇ ಬೋಗಿ ಇರಬಾರದು ಅಂದ್ರೆ ಹೇಗೆ ?"

"ಇದು ಸಮಸ್ಯೆ ಅಲ್ರಪ್ಪಾ, ಜೋಕು ಇದು. ಹಿ ಹಿ ಹಿ" ಅಂತ ನಾನೇ ನಕ್ಕೆ. ನಮಗೆಲ್ಲಾ ಗೊತ್ತು, ನಿಮಗೆ ಉತ್ತರ ಗೊತ್ತಿದೆ. ನಾವೇ ಕಂಡು ಹಿಡೀಲಿ ಅಂತ ನಿಮ್ಮ ಇಚ್ಛೆ ಅಲ್ವಾ ?" ಅಂದ ರಾವ್.

"ನೀವು ಹೇಳಲೇ ಬೇಕು ಉತ್ತರ ಈಗಲೇ "ಅಂತ ಭಟ್ಟ ದುಂಬಾಲು ಬಿದ್ದ.

ಅಷ್ಟೊತ್ತಿಗೆ ರಾವ್ ಹೆಂಡತಿ ಬಂದು ನಿಮ್ಮನೆಯಿಂದ ಫೋನ್ ಬಂದಿದೆ ಯಾರೋ ಬಂದಿದಾರಂತೆ. ನೀವು ಬರಬೇಕಂತೆ ಅಂತ ಹೇಳಿದರು, ತಕ್ಷಣವೇ ನಾನು ಎದ್ದು ಮನೆಗೆ ಓಡಿದೆ.

ನಾನು ಮತ್ತೆ ಸರದಾರಜೀ ಜೋಕು ಹೇಳಿಲ್ಲ ಯಾರಿಗೂ.

ಫೇಂಡಾಗಳ ನಡುವೆ

–ಎಚ್. ಆರ್. ಪ್ರಭಾಕರ

ಮೂರು ದಿನಗಳ ಮಂಡಿ ನೋವಿನ ರೈಲು ಪ್ರಯಾಣದ ಬಳಿಕ ಗೌಹಾತಿಗೆ ಬಂದಿದ್ದ ಮುಖ್ಯ ಉದ್ದೇಶ Conference ನಲ್ಲಿ ಭಾಗವಹಿಸುವುದೇ ಆದರೂ, ಸದಾ ಹಸಿರಾಗಿರುವ ಅಸ್ಸಾಂನಲ್ಲಿ ತಿರುಗುವ ಆಸೆಯೋ ಪ್ರಬಲ ಕಾರಣವೆಂದರೆ ತಪ್ಪಲ್ಲ. ಕೆಲವು ಆಹ್ವಾನಿತ ಅತಿಥಿಗಳು ಬರದಿದ್ದ ಕಾರಣ ಕೊನೆಯ ದಿನದ ಕಾರ್ಯಕ್ರಮ ಮೊಟಕಾಯಿತು. ಅದಕ್ಕೆ ಪೂರ್ತಿ ಚಕ್ಕರ್ ಕೊಟ್ಟು ಕಾಜಿರಂಗ ರಾಷ್ಟ್ರೀಯ ಉದ್ಯಾನಕ್ಕೆ ಭೇಟಿ ಕೊಡಲು ನಿರ್ಧರಿಸಿದೆ. ಆದರೆ ಕಾರ್ಯಕ್ರಮ ಪೂರ್ವ ನಿಯೋಜಿತವಲ್ಲವಾದ್ದರಿಂದ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸುವುದು ಸುಲಭವಾಗಿರಲಿಲ್ಲ.

ಹೇಗಾದರೂ ಆಗಲೆಂದು ಅಸ್ಸಾಂ tourist ಆಫೀಸಿನ ಮುಂದೆ ಹಾಜರಾದೆ, ಕಾಜೀರಂಗದ ಬಸ್ಸು ಹಿಡಿಯಲೆಂದು. ಆಗ ಬೆಳಿಗ್ಗೆ 9 ಗಂಟೆ. ಇನ್ನೂ ಕಸ ಗುಡಿಸುತ್ತಿದ್ದರು. ಬಸ್ಸು ಹೊರಡುವುದು 9 ಗಂಟೆಗಾದರೂ ಆಫೀಸು ತೆಗೆಯುವುದು 10 ಗಂಟೆಗೆ. ನಿಧಾನವಾಗಿ ಕಂಡಕ್ಟರ್ರೂ ಡ್ರೈವರ್ರೂ ಬಂದರು. ಬಸ್ಸಿನಲ್ಲಿ ಧಾರಾಳವಾಗಿ ಜಾಗವಿತ್ತು. ಪ್ರಯಾಣಿಕರು ಏರಿದರು. ಇಲ್ಲಿ 'ರು' ಪ್ರತ್ಯಯದ ಅಗತ್ಯ ಇರಲಿಲ್ಲ. ಏಕೆಂದರೆ ಕೊನೆಗುಳಿದ ಪ್ರಯಾಣಿಕ ನಾನೊಬ್ಬ ಮಾತ್ರ. ಕಾಡಿನ ಮಧ್ಯದಲ್ಲಿರುವ ಕಟ್ಟಡಗಳು, ಪ್ರವಾಸೀ ಮಂದಿರಗಳ ಜೀರ್ಣೋದ್ಧಾರ ನಡೆಯುತ್ತಿತ್ತಂತೆ, ಆದ್ದರಿಂದ ಉಳಿದ ಪ್ರಯಾಣಿಕರು ಹೊರಡುವ ಉತ್ಸಾಹ ತೋರಲಿಲ್ಲ. ಬಹಳ ದೂರದಿಂದ ಬಂದ ನಾನು ನಿರಾಶನಾಗಿ ಹೋಗಬಾರದೆಂಬ ಘನೋದ್ದೇಶದಿಂದಲೋ ಏನೋ ಅಂತೂ ಡ್ರೈವರು ಮತ್ತು ಕಂಡಕ್ಟರ್ರು ಒಂಭತ್ತು ಗಂಟೆಗೆ ಬಸ್ಸು ಹೊರಡಿಸಿದರು ಆದರೆ ಪ್ರವಾಸೀ ಮಂದಿರದಲ್ಲಿ ಜಾಗ ಕೊಡಿಸುವ ಬಗ್ಗೆ ಜವಾಬ್ದಾರಿ ಹೊತ್ತುಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಈ ಜನ ಇಂಗ್ಲೀಷ್, ಹಿಂದಿ, ಬಂಗಾಲಿ, ಅಸ್ಸಾಮಿ ಯಾವ ಭಾಷೆ ಮಾತನಾಡಿದರೂ ಎಲ್ಲವೂ ಒಂದೇ ರೀತಿ ಕೇಳಿಸುತ್ತದೆ. ಆದ್ದರಿಂದ ನಮ್ಮ ಸಂಭಾಷಣೆ ನಿಧಾನವಾಗಿ ನಡೆಯಿತು.

ಗೌಹಾತಿಯಿಂದ ಕಾಜಿರಂಗ ಇನ್ನೂರು ಕಿ. ಮಿ ದೂರ-ದಿಬ್ರೂಘರ್, ಜೋರ್ಹಟ್‌ಗಳಿಗೆ ಹೋಗುವ ಹೆದ್ದಾರಿಯಲ್ಲಿದೆ. ಗೌಹಾತಿ ಬ್ರಹ್ಮಪುತ್ರ ನದಿಯ ದಂಡೆಯ ಮೇಲಿದೆ. ಪೂರ್ವೋತ್ತರ ದಿಕ್ಕುಗಳಲ್ಲಿ ಬೆಟ್ಟಗಳಿವೆ. ಮೇಘಾಲಯ, ಮಿಜೋರಾಂ ಮುಂತಾದ ರಾಜ್ಯಗಳು ಪರ್ವತ ಪ್ರದೇಶಗಳಾದ ಮೇಲೆ ಹೆಚ್ಚು ಕಡಿಮೆ ಬಯಲು ಸೀಮೆಯೆಲ್ಲಾ ಅಸ್ಸಾಂ ರಾಜ್ಯವೇ. ಬಸ್ಸು ಪೂರ್ವದ ಬೆಟ್ಟಗಳ ಮಧ್ಯ ತೂರಿಕೊಂಡು ಆಚೆ ಇರುವ ಬಯಲನ್ನು ಪ್ರವೇಶಿಸಿತು.

ಈ ಸ್ಥಳಗಳು ನಮ್ಮ ಪಶ್ಚಿಮ ಘಟ್ಟಗಳ ಮಲೆನಾಡನ್ನು ಹೋಲುತ್ತವೆ. ಎಲ್ಲೆಲ್ಲೂ ಬಾಳೆ. ಅಡಿಕೆ ಮರಗಳು. ಮೆಣಸನ್ನೂ ಬೆಳೆಯುತ್ತಾರೆ.ಉದ್ದುದ್ದನೆಯ ಮರಗಳು ಆಕಾಶದೆತ್ತರ ಬೆಳೆದು ಬೆಟ್ಟಗಳನ್ನೆಲ್ಲಾ ಆವರಿಸಿಕೊಂಡು ನಿಂತಿವೆ. ತೆಂಗಿನ ಮರಗಳು ಇವೆ. ಮಲೆನಾಡಿನಲ್ಲಿಯಂತೆಯೇ ಕೆಸುವಿನ ಗಿಡಗಳು ಕಾಡಲ್ಲೆಲ್ಲಾ ಹರಡಿವೆ ಬಿದಿರು ಮೆಳೆಗಳು ಇಲ್ಲದಿರುವ ಜಾಗವೇ ಇಲ್ಲ, ಅಸ್ಸಾಂನಲ್ಲಿ ಕೈಗಾರಿಕೆಗಳು ಬಹಳ ಕಡಿಮೆ ಎಲ್ಲ ಪದಾರ್ಥಗಳು ಹೊರಗಿನಿಂದ ಬರಬೇಕು. ಆದ್ದರಿಂದ ಲಾರಿಗಳ ಓಡಾಟ ಜಾಸ್ತಿ, ರಸ್ತೆಗಳು ಚೆನ್ನಾಗಿವೆ. 'ಆತಂಕವಾದಿ'ಗಳ ಪ್ರಯುಕ್ತ ಗಡಿರಕ್ಷಕ ಸೇನಾಪಡೆಗಳ ಓಡಾಟ ಹೆಚ್ಚು (ಇಲ್ಲಿದ್ದ ಏಳು ದಿನಗಳಲ್ಲಿ ಯಾವ ಆತಂಕವಾದಿ ಯನ್ನೂ ನೋಡುವ ಸುಯೋಗ ನನಗೆ ಸಿಗಲಿಲ್ಲ !)

ಸುಮಾರು ಮೂರು ಗಂಟೆಗಳ ನಂತರ ನವಗಾಂವ್ (ಅಂದರೆ ಹೊಸಹಳ್ಳಿ !) ಎಂಬ ಊರು ಸಿಕ್ಕಿತು. ಜಿಲ್ಲೆಯ ಮುಖ್ಯ ಕೇಂದ್ರ. ದೊಡ್ಡ ಊರು. ಎಲ್ಲಿ ನೋಡಿ ದರೂ ಹೆಣಿಗೆಯ ಸಾಮಾನುಗಳು-ಕುರ್ಚಿ, ಮೇಜು, ಬುಟ್ಟಿ, ಹೀಗೆ ಇತರೆ ಎಲ್ಲ ತರಹದ ಪ್ರವಾಸಿ ಆಕರ್ಷಣೆಯ ಅಂಗಡಿಗಳೂ ಇವೆ, ಘೆಂಡಾಗಳ ದರ್ಶನ ಪಡೆದು ಹಿಂತಿರುಗುವಾಗ (ನಾಳೆ) ಇಲ್ಲೇ ಊಟ ಅಸ್ಸಾಂ ಪ್ರವಾಸೋದ್ಯಮದ ವತಿಯಿಂದ ಆದಕ್ಕೆ ಈಗಲೇ ಹೆಸರು ನೋಂದಾಯಿಸಿ ನಾವು ಸಸ್ಯಭಕ್ಷಕರೋ ಪ್ರಾಣಿಭಕ್ಷಕರೋ ಎಂದು ತಿಳಿಸಬೇಕು. ಇದು ನಾಳಿನ ಊಟಕ್ಕೆ. ಈಗ ?

ಇಂದಿನ ಊಟ ಬೇರೆ ಯಾವುದೋ ಹೋಟಲಲ್ಲಿ, ಶುದ್ಧ ಶಾಕಾಹಾರಿಗಳು ಅಪರೂಪದ ಇಲ್ಲಿ ಮೀನು, ಮೊಟ್ಟೆ, ಇಲ್ಲದ ಆಹಾರಗಳೇ ಇಲ್ಲ. ಅಕ್ಕಿಯೇ ಮುಖ್ಯ ಧಾನ್ಯ. ಚಪಾತಿ ಸಿಗುವುದು ಕಷ್ಟ. ಮೊಸರೂ ಕಾಣಸಿಗುವುದಿಲ್ಲ.

ಊಟವಾದ ನಂತರ ಪ್ರಯಾಣ ಮತ್ತೆ ಮುಂದುವರೆಯಿತು. ಹಸಿರು ತೋಟ ಗಳನ್ನು, ಗದ್ದೆಗಳನ್ನು ಸೀಳಿಕೊಂಡು ರಸ್ತೆ ಮುಂದುವರೆಯುತ್ತಿತ್ತು ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ಕಾಜಿರಂಗ ತಲುಪಿದೆವು. ಪ್ರವಾಸೋದ್ಯಮದ ವಿಶ್ರಾಮ ಗೃಹಗಳನ್ನು ಟಾ ಟಾ ಟೀ ತೋಟಗಳು ಮತ್ತು ಅಸ್ಸಾಂ ಸರ್ಕಾರದ ಕಾಫಿ ತೋಟ ಗಳ ನಡುವೆ ಕಟ್ಟಿದ್ದಾರೆ. ಬ್ರಿಟಿಷರ ಕಾಲದ ವಿಶ್ರಾಮ ಗೃಹಗಳು ವಿಶಾಲವಾಗಿವೆ.

ಇಲ್ಲಿ ಶ್ರೀ ಸ. ಮತ್ತು ಶ್ರೀ ದ. ರವರ ಪರಿಚಯವಾಯಿತು. ನಿವೃತ್ತ ರೈಲ್ವೇ ಅಧಿಕಾರಿಗಳಾದ ಶ್ರೀ ಸ. ರವರು ತಮ್ಮ ಶ್ರೀಮತಿಯವರೊಡನೆ ಬೆಂಗಳೂರಿನಿಂದ ಬಂದಿದ್ದರು. ಶ್ರೀ ದ. ರವರು ಯಾವುದೋ ವಿದೇಶೀ ಕಂಪನಿಯ ಅಸ್ಸಾಂ ವಿಭಾಗದ

ಮುಖ್ಯಸ್ಥರು. ಆತ ಒಬ್ಬರೇ ಇರುತ್ತಿದುದರಿಂದ ಅವರ ಜೊತೆ ಅದೇ ಕೋಣೆಯಲ್ಲಿ ಉಳಿದುಕೊಳ್ಳಲು ಸಾಧ್ಯವಾಯಿತು.

ಇಲ್ಲೆಲ್ಲಾ ಐದು ಗಂಟೆಗೆ ಕತ್ತಲಾಗಿ ಬಿಡುವುದರಿಂದ, ಬೇಗ ಒಂದು ಕಪ್ ಟೀ ಕುಡಿದು ತಿರುಗಾಡಲು ಹೊರಟೆ. ವಿಶ್ರಾಮ ಗೃಹದ ಮುಂಭಾಗದಲ್ಲಿ ಟಾ ಟಾ ಟೀ ತ್ತೋಟಗಳು ಈ ಗಿಡಗಳು ಸುಮಾರು 2 ಅಡಿ ಎತ್ತರ-ಸ್ವಾಭಾವಿಕವಾಗಿ ಬೆಳೆಯಲು ಬಿಟ್ಟರೆ ಹತ್ತು ಹನ್ನೆರಡು ಅಡಿ ಬೆಳೆಯ ಬಲ್ಲವು. ಹೆಚ್ಚು ಇಳುವರಿಗಾಗಿ ಮೊಟಕು ಗೊಳಿಸುವುದರಿಂದ, ಮೇಲ್ಭಾಗ ಹಸಿರು ತಟ್ಟೆಯಂತೆ ಇರುತ್ತದೆ. ಕೆಳಭಾಗದ ಕಾಂಡ ಬಲಿಷ್ಠವಾಗಿ ದಪ್ಪಗಿರುತ್ತದೆ. ಎಲ್ಲಗಿಡಗಳದೂ ಒಂದೇ ಎತ್ತರ, ಮಧ್ಯ ಮಧ್ಯ ನೆರಳಿಗೋಸ್ಕರ ದೊಡ್ಡ ಮರಗಳು ಇಳಿಜಾರಿನಲ್ಲಿ ಬೇಳೆಯುವ ಈ ತೋಟಗಳು ಕಣ್ಣಿಗೆ ಹಬ್ಬ

ಈ ತೋಟಗಳಲ್ಲಿ ಕೆಲಸ ಮಾಡುವ ಮೇಲಧಿಕಾರಿಗಳ ಜೀವನ ಆತಂಕಮಯ ವಾದದ್ದು. ನಾವು ಗೌಹಾತಿಗೆ ಬಂದ ಹಿಂದಿನ ದಿನವೇ ಒಬ್ಬ (ಟೀ ತೊಟದ) ಮ್ಯಾನೇ ಜರ್‌ನನ್ನು ಆತಂಕವಾದಿಗಳು ಅಪಹರಿಸಿದ್ದರು. ಆತನ ಪತ್ನಿ ಪತ್ರಿಕೆಗಳ ಮೂಲಕ ತಮ್ಮ ಕಷ್ಟಗಳನ್ನು ಹೇಳಿಕೊಂಡು ಪತಿಯನ್ನು ಬಿಡುಗಡೆ ಮಾಡಲು ಆತಂಕವಾದಿ ಗಳಿಗೆ ಮನವಿ ಮಾಡಿಕೊಂಡಿದ್ದರು. ಹೊರನೋಟಕ್ಕೆ ಕಾಣುವಂತೆ ಇಲ್ಲಿಯ ಜೀವನ ಶಾಂತವಾಗಿಲ್ಲ ರಾತ್ರಿ ಒಂಭತ್ತರ ನಂತರ ಹೊರಗೆ ಹೋಗಲು ಜನ ಹಿಂದೆಗೆಯುತ್ತಾರೆ.

ಈ ಪೂರ್ವೋತ್ತರ ರಾಜ್ಯಗಳಲ್ಲಿ ಬೋಡೊ, ನಾಗಾ, ಕುಶಿ, ಖಾಸಿ, ಅಹೋಂ ಇತ್ಯಾದಿ ಬುಡಕಟ್ಟು ಜನಾಂಗದವರಿದ್ದಾರೆ. ಜೊತೆಗೆ ಬಾಂಗ್ಲಾದಿಂದ ಬಂದ ನಿರಾಶ್ರಿ ತರು. ಪಶ್ಚಿಮ ಬಂಗಾಳದ 'ಬಾಬು'ಗಳು, ದೇಶದ ಇತರ ಭಾಗಗಳಿಂದ ಬಂದ ವ್ಯಾಪಾರಸ್ಥರು ಇದ್ದಾರೆ. ಹಾಗಾಗಿ ಅಸಮಾಧಾನ ಘರ್ಷಣೆ ಇದ್ದದ್ದೇ. ಶಾಂತಿಯಿಂದ ಜೀವಿಸುವುದು ಮಾನವನ ಪ್ರವೃತಿ ಅಲ್ಲವಲ್ಲ ! ಚರಿತ್ರೆಯ ಪುಟಗಳೇ ಏಕೆ ಇಂದಿನ ವರ್ತಮಾನ ಪತ್ರಿಕೆಯ ಪುಟಗಳೂ ತಿಳಿಸುವುದು ಅದನ್ನೇ ಅಲ್ಲವೇ ?

ಟೀ ತೋಟವನ್ನು ದಾಟಿದರೆ ದಿಬ್ರೂಘರ್‌ನ ಹೆದ್ದಾರಿ ಆ ರಸ್ತೆಯಲ್ಲಿ ಸ್ವಲ್ಪ ದೂರ ನಡದು ಬಲಕ್ಕೆ ತಿರುಗಿದರೆ ಕಾಲುದಾರಿಯಲ್ಲಿ ಒಂದು ಹಳ್ಳಿ. ಮುಂದೆ ಸಣ್ಣ ತೊರೆ. ಪಕ್ಕದಲೊಂದು ದಿಬ್ಬ ದಿಬ್ಬದ ಮೇಲೊಂದು ಗುಡಿಸಲು ಸುತ್ತಬೇಲಿ ಮಣ್ಣಿನ ಜಗಲಿಯ ಮೇಲೊಬ್ಬ ಕರಿಕಂಬಳಿ ಹೊದ್ದು ಕುಳಿತಿದ್ದ. ಮಾತನಾಡಿಸಿದರೆ

ಬಾಯೇ ಬಿಡಲೊಲ್ಲ! ಮುಖದಲ್ಲಿ ಅಸ್ಥಿರತೆ, ಹೆದರಿಕೆ, ಯೋಚನೆ ಎದ್ದು ಕಾಣು ತ್ತಿದ್ದವು. ಆ ಸ್ಥಳ ಆತನದಲ್ಲವೆಂದೂ, ಯಾರಿಗೋ ಕೆಲಸ ಮಾಡುತ್ತಾನೆಂದೂ ಕಷ್ಟ ಪಟ್ಟು ತಿಳಿದು ಕೊಂಡಾಯಿತು. ಹಾಗೇ ಮುಂದೆ ಹೋದರೆ ಇನ್ನೊಂದು ದಿಬ್ಬ ನಾಲ್ಕು ಸಣ್ಣ ಗುಡಿಸಲುಗಳು ಮಧ್ಯ ಅಂಗಳ ಒಂದು ಗುಡಿಸಲಿನ ಮುಂದೆ ಬೆಂಚಿನ ಮೇಲೆ ಹೆಂಗಸರಿಬ್ಬರು ಕುಳಿತಿದ್ದರು ಅಂಗಳದಲ್ಲಿ ಸುಮಾರು ಎಂಟು ಅಡಿ ವೃತ್ತದಲ್ಲಿ ಭತ್ತದ ಕುಯಿಲನ್ನು ಹರಡಿದ್ದರು. ಅವುಗಳ ಮೇಲೆ ಒಬ್ಬಾತ, ಮಧ್ಯ ವಯಸ್ಕ, ಮೂರು ಬೆಳೆದ ಕರುಗಳನ್ನು ಓಡಿಸುತ್ತ ತಾನೂ ಓಡುತಿದ್ದ ಮಕ್ಕಳು 'ರಿಂಗಾರಿಂಗಾರೋಸಸ್' ಎಂದು ಆಡುವಂತೆ. ಆದರೆ ಆತನ ಮುಖದಲ್ಲಿ ಚಿಂತೆ, ದುಗುಡ ತುಂಬಿತ್ತು ಹೆಂಗಸರು ಮೇಲೆಳುತ್ತಾ ನನ್ನನ್ನು ಸ್ವಾಗತಿಸಲು ಪ್ರಯತ್ನಿಸಿ ದರು. ಆದರೆ ಆತನ ಮುಖದಲ್ಲಿ "ನಮ್ಮ ಕಷ್ಟ ನಿಮಗೇನು ತಿಳಿಯುತ್ತದೆ ? ಸುಮ್ಮನೆ ಹೋಗು" ಎಂಬಭಾವನೆ ಇತ್ತು. ಆತ. ಬೆಳದಿದ್ದ ಭತ್ತ ಆತನ ಸಂಸಾರಕ್ಕೇ ಸಾಲುತ್ತಿರಲಿಲ್ಲ. ಎಂಬುದನ್ನಾತ ತಿಳಿಸಿದ. ಈ ಜನಗಳು ಹಳ್ಳಿಯಿಂದ ಹೊರಗೆ ವಾಸಿಸುವರು. ಎಲ್ಲೋ ಕೂಲಿ ಮಾಡಿಕೊಂಡು ಯಾರಿಗೊ ದುಡಿಯುತ್ತಾ. ಸಣ್ಣ ಪುಟ್ಟ ಬೆಳೆ ಬೆಳೆದು, ಪುಟ್ಟ ಪುಟ್ಟ ತೊರೆಗಳಲ್ಲಿ ಮೀನು ಹಿಡಿದು ಹೇಗೊ ಜೀವಿಸು ತ್ತಾರೆ. ಹಾಗೆಯೇ ಮುಂದೆ ಹೋದರೆ ಇನೊಂದು ದಿಬ್ಬ, ಗುಡಿಸಲು ಅಲ್ಲಿ ಒಂದು ಪುಟ್ಟ ಹುಡುಗಿ ಮತ್ತು ಅವಳ ತಾಯಿ ಇದ್ದರು. ಆಕೆ ತರಕಾರಿ ಬೀಜಗಳನ್ನು ನೆಡುತ್ತಿದ್ದಳು. ಹಿಂದಿಯಲ್ಲಿ ಮಾತನಾಡಿದಳು ಆ ಮಗುವಿಗೆ ಐದು ವರ್ಷವೆಂದೂ ಮುಂದಿನ ವರ್ಷ ಪಕ್ಕದ ಹಳ್ಳಿಯ ಶಾಲೆಗೆ ಕಳುಹಿಸುವೆನೆಂದೂ ಹೇಳಿದಳು.

ವಿಶ್ರಾಮ ಗೃಹಕ್ಕೆ ಹಿಂತಿರುಗುವ ಹೊತ್ತಿಗೆ ಕತ್ತಲಾಗಿತ್ತು. ಪೂರ್ಣ ಚಂದ್ರ ಮರಗಳ ಸಂದಿಯಿಂದ ಕತ್ತಲನ್ನು ನಿವಾರಿಸಲು ಪ್ರಯತ್ನಿಸುತ್ತಿದ್ದ. ಕೀಟಗಳ ಸದ್ದು ಕಿಣಿ ಕಿಣಿ ಗಂಟೆಯಂತೆ ಎಲ್ಲೆಲ್ಲೂ ಹರಡಿತ್ತು ಅವು ಆಗೊಮ್ಮೆ ಈಗೊಮ್ಮೆ ಸುಮ್ಮ ನಾದಾಗ ನಿಶ್ಶಬ್ದ ನೀರವತೆ!

ಶ್ರೀ ದ, ಶ್ರೀ ಸ. ಮತ್ತು ಶ್ರೀಮತಿ ಸ. ರವರು ಹರಟೆ ಹೊಡೆಯುತ್ತಾ. ಕುಳಿತಿದ್ದರು ವಿಷಯ ಅಧೋಗತಿಗಳಿಯುತ್ತಿರುವಮೌಲ್ಯಗಳು ಲಂಚ.ಮನಮೋಹನ ಸಿಂಗರ ಆರ್ಥಿಕ ನೀತಿ, gatt ಇತ್ಯಾದಿ ಇತ್ಯಾದಿ ಶ್ರೀ ದ. ರವರಿಗೆ ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಕೆಲಸ ಮಾಡಿ ಅನುಭವವಿದೆ. ಅವರು ಅನೇಕ ಔಷಧಗಳ ಬೆಲೆಗಳನ್ನು ಕೃತ್ರಿಮವಾಗಿ ಇಳಿಸಿ, ದೇಶೀ ಕಂಪೆನಿಗಳಿಗೆ ನಷ್ಟ ಉಂಟು ಮಾಡುತ್ತಾರಂತೆ. ಆಮೇಲೆ ಆ ಕಂಪೆನಿಗಳನ್ನು 'ಸ್ವಾಹಾ' ಮಾಡಿ ಔಷಧಗಳ ಬೆಲೆಗಳನ್ನು ಗಗನಕ್ಕೇರಿಸು ತ್ತಾರಂತೆ. ದುಡಿತ ಭಾರತೀಯರದ್ದು ಲಾಭ ವಿದೇಶಕ್ಕಂತೆ, East India Company ಯ ಆಧುನಿಕ ಅವತಾರವಂತೆ, ಇದು ಒಳ್ಳೆಯ ಸಂಪರ್ಕ ಸಾಧನ,

ಸಾಕಷ್ಟು ವಿದ್ಯುಚ್ಛಕ್ತಿ, ಮುಖ್ಯವಾಗಿ ಸರ್ಕಾರದ ಸಹಕಾರ ಇದ್ದರೆ, ದೇಶೀಯ ಕಂಪನಿಗಳು ಬಹು ರಾಷ್ಟ್ರೀಯ ಕಂಪೆನಿಗಳಿಗೆ ಅಂಜುವ ಅಗತ್ಯವೇ ಇಲ್ಲವಂತೆ. ಅನೇಕ ಸರಕಾರೀ ಉದ್ಯಮಗಳಲ್ಲಿ ಕಿರಿಯಯಸ್ಸಿನ ಅಧಿಕಾರಿಗಳಿಗೇ ಸಂಬಳ ತುಂಬಾ ಹೆಚ್ಚು ಹಾಗಾಗಿ ಬಡವ ಬಲ್ಲವರ ಅಂತರ ಹೆಚ್ಚಾಗಿದೆಯಂತೆ. ಒಟ್ಟಿನಲ್ಲಿ ತಾತ್ಪರ್ಯ ಸರ್ಕಾರವೇ ದೇಶವನ್ನು ಹಾಳುಮಾಡುತ್ತಿದೆಯಂತೆ !

''the country is going to dogs' ಎಂದು ಶ್ರೀ ದ. ರವರು ಇಡೀ "ಚರ್ಚೆಗೆ" ಮುಕ್ತಾಯ ಹಾಡಿ ಗುಂಡುಹಾಕಿ, ಊಟ ಹೊಡೆದು, ದೇಶದ ವಿಭಜನೆಗೆ ಕಾರಣರಾದವರನ್ನು ಶಪಿಸುತ್ತಾ, ಸುಭಾಷ್‌ಚಂದ್ರ ಬೋಸರು ಇದ್ದಿದ್ದರೆ ಸಿಗಬಹುದಾಗಿದ್ದ ರಾಮರಾಜ್ಯದ ಕನಸನ್ನು ಕಾಣುತ್ತಾ ನಿದ್ದೆಹೋದರು.

ನನಗೆ ಅಂತಹ ಚೆನ್ನಾಗಿ ನಿದ್ರೆ ಬರಲಿಲ್ಲ. ಕಾಡಿನ ನೀರವತೆಯಲ್ಲಿ ಸಣ್ಣ ಸಣ್ಣ ಶಬ್ದಗಳೂ ತಲೆಯ ಮೇಲೆ ಹೊಡೆದಂತೆ ಕೇಳಿಸುತ್ತವೆ. ಪಕ್ಕದ ಕೊಠಡಿಯವರ ಗೊರಕೆ ಸಹ ಗಡಿಯಾರದ ಶಬ್ದದಂತೆ ಸ್ಪಷ್ಟವಾಗಿ ಕೇಳಿಸುತ್ತಲೇ ಇತ್ತು.

ಬೆಳಿಗ್ಗೆ ಕಾವಲುಗಾರ ಎಬ್ಬಿಸಿದಾಗ ಇನ್ನೂ ಐದು ಗಂಟೆ, ಸೂರ್ಯ ಆಗಲೇ ಹುಟ್ಟುವ ಆತುರದಲ್ಲಿದ್ದ. ಕೋಣೆಯಲ್ಲಿ ಕರೆಂಟ್ ಇರಲಿಲ್ಲ ! ಛಳಿಯಲ್ಲಿ ಕೊರೆಯುತ್ತಿದ್ದ ತಣ್ಣೀರಲ್ಲಿ ಮುಖ ತೊಳೆದು, ಬಿಸಿ ಬಿಸಿ ಟೀ ಕುಡಿದು ಘೇಂಡಾಗಳ ಭೇಟಿಗೆ ತಯಾರಾದೆ. ಶ್ರೀ ದ. ಟೀ ಕುಡಿದು ನಿದ್ದೆ ಮುಂದುವರೆಸಿದರು.

ಹೆದ್ದಾರಿಯನ್ನು ದಾಟಿಕೊಂಡು ಸುಮಾರು 2 ಕಿ. ಮೀ. ಹೋದರೆ ಕಾಜಿರಂಗ ಪಾರ್ಕ್ ಸಿಗುತ್ತದೆ. ನಾವು ಅಲ್ಲಿಗೆ ಬಸ್‌ನಲ್ಲಿ ಹೋದಾಗ ಚೆನ್ನಾಗಿ ಬೆಳಕು ಹರಿದಿತ್ತು, ನಮ್ಮನ್ನು ಸ್ವಾಗತಿಸಲು ಒಂದು ಘೇಂಡಾಮೃಗ ಛಳಿಯನ್ನೂ ಲೆಕ್ಕಿಸದೆ ಆಗಲೇ ಹಾಜರಾಗಿತ್ತು. ಆದರೆ ಸಂಕೋಚದಿಂದಲೋ ಏನೋ ಸುಮಾರು ಅರ್ಧ ಕಿ. ಮೀ. ದೂರದಲ್ಲಿ ನಿಂತು ಬಿಟ್ಟಿತ್ತು ಅಲ್ಲೇ ಸ್ವಲ್ಪ ದೂರದಲ್ಲಿ ಸೈಕಲ್ ಟೈರ್ ಬಿದ್ದಿದ್ದಂತೆ ಕಂಡಿತು. ಅದು ಹುಲ್ಲಿನಲ್ಲಿ ಅಡಗಿ ಕುಳಿತಿದ್ದ ಕಾಡುಕೋಣದ ಕೊಂಬುಗಳು ಎಂದು ಆಮೇಲೆ ತಿಳಿಯಿತು.

ನಮ್ಮನ್ನು ಸುತ್ತಾಟಕ್ಕೆ ಕರೆದೊಯ್ಯಲು ಆನೆಗಳು ಸಜ್ಜಾಗಿ ನಿಂತಿದ್ದವು. ಅವುಗಳ ಮೇಲೆ ಹತ್ತಲು ಅನುಕೂಲವಾಗುವಂತೆ ಮಂಚಿಗೆಯೊಂದನ್ನು ಕಟ್ಟಿದ್ದರು. ಎಲ್ಲ

ಪ್ರವಾಸಿಗಳನ್ನೂ ಆನೆಗಳ ಮೇಲೆ ತಲಾ ಮೂರು ನಾಲ್ಕು ಮಂದಿಯಂತೆ ಹಂಚಿದ ಮೇಲೆ ಮಾವಟಿಗರು ಏರಿದರು ಒಟ್ಟು ಎಂಟು ಆನೆಗಳು, ನಾಲ್ಕು ಗಂಡು, ನಾಲ್ಕು ಹೆಣ್ಣು ನಮ್ಮ ಈ ಮೆರವಣಿಗೆ ಹೊರಡುತ್ತಿದ್ದಂತೆಯೇ ನಾಲ್ಕು ಅಡಿಗಿಂತ ಕುಳ್ಳಗಿದ್ದ ಮೂರು ಸಣ್ಣ ಮರಿಗಳೂ ತಂತಮ್ಮ ಅಮ್ಮಂದಿರ ಹಿಂದೆ ಹೊರಟವು.

ಘೇಂಡಾಗಳ ವಾಸಸ್ಥಾನ ಗುಡ್ಡಗಾಡು ಪ್ರದೇಶವಲ್ಲ, ಜೊಂಡುಹುಲ್ಲಿನ ಸಮ ತಟ್ಟಾದ ಬಯಲು ಇಲ್ಲಿ ಹುಲ್ಲು ಆನೇಕ ಕಡೆ ಆನೆಗಳಿಗಿಂತಲೂ ಎತ್ತರವಾಗಿ ಬೆಳೆದಿರುತ್ತದೆ. ಈ ಹುಲ್ಲಿನ ಹೆಸರೇ "ಆನೆ ಹುಲ್ಲು" Elephant gross, ಈ ಜೌಗಿನಲ್ಲಿ ಹುಲ್ಲು ಬಿಟ್ಟು ಬೇರಾವ ಗಿಡಮರಗಳೂ ಕಾಣಲಿಲ್ಲ.

ಮುಂಜಾನೆಯ ಹಿಮ ಈ ಹುಲ್ಲಿನ ಮೇಲೆ ಎರಡು-ಮೂರು ಅಡಿ ಎತ್ತರದವರೆಗೂ ವ್ಯಾಪಿಸಿದ್ದುದರಿಂದ ಸ್ವಲ್ಪದೂರದಲ್ಲಿ ಸಮುದ್ರವಿರಬಹುದೆಂಬ ಭ್ರಮೆ ಉಂಟಾಗುತ್ತಿತ್ತು. ಸೂರ್ಯನ ಬಿಸಿಲು ಚುರುಕಾದಂತೆ ಮಂಜು ಮಾಯವಾಗ ತೊಡಗಿತು. ಒಂದೇ ಪ್ರದೇಶದಲ್ಲಿ ಒಂದು ಕಡೆ ಗಿಡಮರಗಳಿಂದ ಸಮೃದ್ಧವಾದ ಗುಡ್ಡ ಗಾಡು, ಮತ್ತೊಂದು ಮಗ್ಗುಲಲ್ಲಿ ಕೇವಲ ಜೊಂಡು ಹುಲ್ಲಿನ ಸಮತಟ್ಟಾದ ಬಯಲು ದಿಗಂತವರೆಗೂ ಹಬ್ಬಿದೆ.

ಈ ಜೊಂಡು ಹುಲ್ಲಿನ ಕಾಡಿನ ಆಚೆ ಉತ್ತರಕ್ಕೆ ಬ್ರಹ್ಮಪುತ್ರಾ ನದಿ ಹರಿಯುತ್ತದೆ. ಪ್ರತಿವರ್ಷ ಇಲ್ಲಿ ಪ್ರವಾಹದ ಹಾವಳಿ. ಘೇಂಡಾ ಮತ್ತಿತರ ಪ್ರಾಣಿಗಳಿಗೆ ವಾಸ ಸ್ಥಾನವಾಗಿರುವ ಈ ಜೌಗು ಪ್ರದೇಶ, ಬ್ರಹ್ಮಪುತ್ರ ತನ್ನ ಪಾತ್ರವನ್ನು ಆಗಾಗ್ಗೆ ಬದಲಿಸುತ್ತಿರುವುದರಿಂದ ಉಂಟಾಗಿರಬೇಕು.

ನಮ್ಮ ಸವಾರಿ- 8ಆನೆಗಳು ಮೂರು ಮರಿಗಳು ಪಶ್ಚಿಮ ದಿಕ್ಕಿನತ್ತ ಹೊರಟಿತು. ಈ ಹುಲ್ಲುಗಾಡಿನಲ್ಲಿ ರಸ್ತೆಗಳಿಲ್ಲದಿದ್ದರೂ ಆನೆಗಳು ನಡೆದ ಕಾಲುದಾರಿಗಳಿವೆ. ಸ್ವಲ್ಪವೇ ದೂರದಲ್ಲಿ ಎರಡು ಘೇಂಡಾಗಳು ಹುಲ್ಲು ಮೇಯುತ್ತಾ ನಿಂತಿದ್ದವು. ಆನೆಗಳನ್ನು (ನಮ್ಮನ್ನು) ನೋಡಿ ಅವು ಸ್ವಲ್ಪವೂ ವಿಚಲಿತವಾಗಲಿಲ್ಲ. ನಮ್ಮನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ತಮ್ಮ ಪಾಡಿಗೆ ತಾವು ಮೆಲುಕು ಹಾಕುತ್ತಾ ಎಳೆಬಿಸಿಲು ಕಾಯಿಸುತ್ತಾ ನಿಂತಿದ್ದವು. ಈ ಪ್ರಾಣಿಗಳ ಹೆಚ್ಚುಗಾರಿಕೆ ಎಂದರೆ ಅವುಗಳ ಮೂಗಿನ ಮೇಲಿರುವ ಕೊಂಬು, ಮೈ ಮೇಲಿನ ದಪ್ಪ ಕವಚ ದೊಡ್ಡ ದೇಹ ಮತ್ತು ಗಿಡ್ಡ ಕಾಲುಗಳು ಎಮ್ಮೆಗಳಂತೆ ಇವಕ್ಕೆ ಹುಲ್ಲು

ಮಾತ್ರವಲ್ಲದೆ ಕೊಚ್ಚೆಯೂ ಪ್ರಿಯವೆಂದು ಕಾಣುತ್ತದೆ ಇವುಗಳು ಸುಮಾರು ಎಪ್ಪತ್ತು ವರ್ಷ ಬದುಕುತ್ತವಂತೆ. ಕಾಜಿರಂಗದಲ್ಲಿ ಸುಮಾರು ಒಂದು ಸಾವಿರ ಘೇಂಡಾಗಳಿವೆಯಂತೆ. ಹೀಗೆಂದು ಅರಣ್ಯಾಧಿಕಾರಿಗಳು ತಿಳಿಸಿದರು. ಆಶ್ಚರ್ಯವೆಂದರೆ ಇವು ನಿಶಾಚರಗಳಂತೆ.

ಈ ಘೇಂಡಾಗಳನ್ನು ಅಲ್ಲಿಯೇ ಬಿಟ್ಟು ಮುಂದೆ ತೆರಳಿದೆವು. ಅಲ್ಲೊಂದು ಜಿಂಕೆ-ಮರಿ ಇರಬೇಕು, ಕೋಡಿರಲಿಲ್ಲ-ಹುಲ್ಲಿನ ಮಧ್ಯೆ ತುದಿಗಾಲಲ್ಲಿ ನಿಂತಿತ್ತು. ದೊಡ್ಡ ದೊಡ್ಡದಾಗಿ ಕಣ್ಣರಳಿಸಿ, ಕಿವಿ ನಿಮಿರಿಸಿ ನಮ್ಮನ್ನು ನೋಡಿ ಹೆದರಿ-"ಭೀತ ಪರಿಣೇಕ್ಷಣ"ದ ನೆನಪು ಕೊಟ್ಟು ಓಡಿಹೋಯಿತು.

ಇನ್ನೂ ಮುಂದೆ ಪುನಃ ಘೇಂಡಾಗಳ ಒಂದು ಗುಂಪು. ಸಾಮಾನ್ಯವಾಗಿ ಇವು ಮನುಷ್ಯರಿಂದ ದೂರವಿರಲು ಬಯಸುತ್ತವೆ. ಆದರೆ ಇಲ್ಲಿಯ ಘೇಂಡಾಗಳು ಪ್ರವಾಸಿಗಳಿಗೆ ಅಂಜದಿರಲು ಪ್ರವಾಸಿಗಳಿಗೆ ಅಂಜದಿರಲು ಬಹುಶಃ ಆನೆಗಳೇ ಕಾರಣವಿರಬಹುದು. ಒಂದು ಗಂಡಾನೆ ಘೇಂಡಾಮೃಗಕ್ಕೆ ತೀರಾ ಸಮೀಪವೇ ಹಾದು ಹೋದರೂ ಆ ಮೃಗ ತನ್ನ ಪಾಡಿಗೆ ತಾನು ಮೇಲಕು ಹಾಕುವುದನ್ನೇ ಮುಂದುವರೆಸಿತು. ದೊಡ್ಡ ಆನೆ, ಅದರ ಬೆನ್ನ ಮೇಲಿನ ಜನಗಳು ಇದರಿಂದ ವಿಚಲಿತವಾಗದ ಘೇಂಡಾ ಇದನ್ನೆಲ್ಲಾ ನೋಡಿದಾಗ- ಯಾಕೋ ಏನೋ ನಮ್ಮ ರಾಜಕಾರಣಿಗಳ ಹಾಗೂ "ಶೇಷನಾಗ"ದ ನಡುವೆ ಮುಖಾಮುಖಿ ಸಂದರ್ಶನ ನಡೆಯುತ್ತಿರುವಂತೆ ಅನ್ನಿಸಿತು.

ಸ್ವಲ್ಪ ಬಲಕ್ಕೆ ತಿರುಗಿ ನಡೆದರೆ ಅಲ್ಲೊಂದು ಕೆರೆ, ಕಮಲ ಮುಂತಾದ ನೀರು ಹೂಗಳ ಸುತ್ತ ಕೊಚ್ಚೆ. ಕೆರೆಯ ಹಿಂಭಾಗದಲ್ಲಿ ಬೆಟ್ಟಗಳು ಅವುಗಳ ಮಧ್ಯೆ ವಾಹನಗಳ ಓಡಾಟದ ಸದ್ದು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಕೆರೆಯ ಬದಿಯ ಕೊಚ್ಚೆಯಲ್ಲಿ ಕಾಡುಕೋಣಗಳ ಹಿಂಡು. ಬಕ ಪಕ್ಷಿಗಳು, ಕೊಕ್ಕರೆಗಳು ನಿರಾತಂಕವಾಗಿ ಓಡಾಡಿಕೊಂಡಿದ್ದವು. ಪುನಃ ಬಲಕ್ಕೆ ತಿರುಗಿದೆವು. ಅಲ್ಲೊಂದು ಜಿಂಕೆ. ಮೈಮೇಲೆ ಬಿಳಿ ಚುಕ್ಕೆಗಳು ದೊಡ್ಡ ಮರದರೆಂಬೆಗಳಂತೆ ಕವಲೊಡೆದ ಕೋಡುಗಳು-ನಮ್ಮನ್ನು ನೋಡಿ ಓಡಿಹೋಯಿತು. ಮತ್ತೊಮ್ಮೆ ಘೇಂಡಾಗಳದರ್ಶನ. ಇವುಗಳಿಗೆ ಮೂಗಿನ ಮೇಲೆ ಕೊಂಬಿರಲಿಲ್ಲ. ಯಾರೋ ಕತ್ತರಿಸಿದ್ದಾರೆಂದು ನನಗೆ ಅನುಮಾನ. ಒಂದರ ಮೂತಿಯ ಮೇಲೆ ಕೆಂಪು ಕಲೆಯೂ ಇತ್ತು. ನಮ್ಮ ಜೊತೆಯಲ್ಲಿದ್ದ ಆರಣ್ಯಾಧಿಕಾರಿಗಳ ಪ್ರಕಾರ ಹೆಣ್ಣು ಘೇಂಡಾಗಳಿಗೆ ಕೊಂಬು ಇರುವುದಿಲ್ಲವಂತೆ (ಆದರೆ ಇದು ಸತ್ಯವಲ್ಲ ಎಂದು ಆಮೇಲೆ Encyclopedia ಹುಡುಕಿ ಓದಿ ತಿಳಿದುಕೊಂಡೆ)

ಈ ಕೊಂಬುಗಳಿಗೆ-ಇವು ಕೊಂಬುಗಳಲ್ಲ ; ಒಂದು ಬಗೆಯ ಕೂದಲಿನ ಕಗ್ಗಂಟು— ಔಷಧೀಯ ಶಕ್ತಿ ಇದೆಯೆಂಬ ಮೂಢನಂಬಿಕೆ ಜನರಲ್ಲಿ ಬಲವಾಗಿ ಬೇರಿರುವುದರಿಂದ ಮಾರುಕಟ್ಟೆಯಲ್ಲಿ ಬಹಳ ಬೆಲೆ. ಈ ಜಾತಿಯ ಘೇಂಡಾಗಳ ಸಂತತಿಯೇ ನಶಿಸಿ ಹೋಗುತ್ತಿರುವುದರಿಂದ ಇದನ್ನು ಸಂರಕ್ಷಿತ ಪ್ರಾಣಿ ಎಂದು ಘೋಷಿಸಿದ್ದಾರೆ. ಆದರೆ ಕೊಂಬಿನ ಆಸೆಗೆ ಯಾರೋ ಈ ಕೆಲವು ಘೇಂಡಾಗಳನ್ನು "ಹೇಗೊ" ಹಿಡಿದು ಕತ್ತರಿಸಿಕೊಂಡಿರಬೇಕು. ಇದಕ್ಕೆ ಅರಣ್ಯಾಧಿಕಾರಿಗಳ ಸಹಕಾರ ಬೇಕೇ ಬೇಕು. ಬೇಲಿಯೇ ಎದ್ದು ಹೊಲ ಮೆಯ್ದರೆ ? ಹರ ಹರಾ ಶ್ರೀಚೆನ್ನ ಸೋಮೇಶ್ವರನೇ ಗತಿ.

ಈ ಕೊಂಬಿಲ್ಲದ ಘೇಂಡಾಗಳಿಗೆ ಟಾಟಾ ಹೇಳಿ ಮುಂದೆ ಸಾಗಿದಾಗ ಅಲ್ಲೊಂದು ನೀರಿಲ್ಲದ ತೊರೆ ಸಿಕ್ಕಿತು. ಬರೀ ಕೊಚ್ಚೆ, ನೀರಿಗಿಡಗಳು, ಗಬ್ಬು ವಾಸನೆವಿ ಪರೀತ ಸೊಳ್ಳೆ. ಬಹುಶಃ ಮಳೆಗಾಲದಲ್ಲಿ ಕೆರೆ ತುಂಬಿದ ಮೇಲೆ ನೀರು ಈ ತೊರೆಯ ಮೂಲಕ ಬ್ರಹ್ಮಪುತ್ರವನ್ನು ಸೇರುತ್ತದೆ. ಇದರ ಆಚೆ Riding point ಇದೆ. ಇದು ಎರಡನೆಯದು. ನಾವು ಹೊರಟ ಸ್ಥಳ ಮೊದಲನೆಯದು, ಸುಮಾರು ಐದಾರು ಕಿ. ಮೀ ಗಳ ಸುತ್ತಾಟದ ನಂತರ ನಾವು ಇಲ್ಲಿ ಇಳಿದೆವು.

ಎರಡನೆಯ ಸವಾರಿಗೆ ಜನಗಳು ಕಾಯುತ್ತಿದ್ದರು. ಇದ್ದಕ್ಕಿದ್ದಂತೆ ಕನ್ನಡದಲ್ಲಿ ಗಲಾಟೆ ಕೇಳಿಸಿತು. ಬೆಂಗಳೂರಿಂದ ಬಂದಿದ್ದ ಇನ್ನೊಂದು ದೊಡ್ಡ ಗುಂಪು ಕನ್ನಡ ವರದ್ದೇ ಬಂದಿತು.

ಆನೆಯ ಮರಿಗಳು ಹಸಿವಾಗಿತ್ತು, ಅಮ್ಮಂದಿರ ಹಾಲು ಕುಡಿದವು. ಒಂದು ಮರಿ ಪ್ರವಾಸಿಗರತ್ತ ಸೊಂಡಿಲು ಚಾಚಿ ಬಾಳೆಹಣ್ಣು ಬೇಡಿತು ; ಎಲ್ಲೋ ನೋಡು ತ್ತಿದ್ದ ಹುಡುಗನೊಬ್ಬನ ಪ್ಯಾಂಟಿನ ಜೇಬಿನೊಳಗೆ ಸೊಂಡಿಲು ತೂರಿಸಿ, ಏನನ್ನೋ ಕದಿಯಲು ಪ್ರಯತ್ನಿಸಿತು ಇನ್ನೊಂದು ಮರಿ.

ಪ್ರವಾಸೀಮಂದಿರದ ಹಿಂಬದಿಯ ಗುಡ್ಡಗಳ ಮೇಲಿನ ರಬ್ಬರ್ ಮತ್ತು ಕಾಫೀ ತೋಟಗಳ ನಡುವೆ ಗಣೇಶನ ಗುಡಿಯೊಂದು ಇದೆ ಎಂದು ಡ್ರೈವರ್ ಹೇಳಿದ, ಆ ದಿಕ್ಕಿನತ್ತ ನಾನು ಹೊರಟಾಗ ಶ್ರೀ ಮತ್ತು ಶ್ರೀಮತಿ ಸ. ರವರೂ ಜೊತೆಗೆ ಬಂದರು. ಅಲ್ಲಲ್ಲೆ ರಬ್ಬರ್ ಹಾಳೆಗಳನ್ನು ಒಣಗಿಸುತ್ತಿದ್ದ ದೃಶ್ಯ ಕಾಣುತ್ತಿತ್ತು. ಅಲ್ಲೊಂದು ತೊರೆ-ಶುಭ್ರವಾದ ನೀರು ಬಂಡೆಗಳನ್ನು ಬಳಸಿಕೊಂಡು ಜುಳುಜುಳು ಹರಿಯು ತ್ತಿತ್ತು. ಪಕ್ಕದಲ್ಲಿದ್ದ ದಿಬ್ಬದ ಮೇಲೆ ಗಣೇಶನಗುಡಿ. ತೊರೆ ದಾಟಲು ಬೊಂಬಿ ನಿಂದ ಮಾಡಿದ ಸೇತುವೆ, ಶ್ರೀ ಮತ್ತು ಶ್ರೀಮತಿ ಸ. ರವರು ಇಲ್ಲಿಂದಲೇ ಗಣಪತಿಗೆ

ಕ್ಕೆ ಮುಗಿದು ಹಿಂದಿರುಗಿದರು. ನಾನು ಜೊಂಜಿನ ಸೇತುವೆಯ ಮೇಲಿಂದ ತೊರೆ ದಾಟಿ ಬಿಬ್ಬ ಹತ್ತಿದೆ. ಕಾಫಿ ತೋಟಗಳಲ್ಲಿ ಗೊಂಚಲು ಗೊಂಚಲಾಗಿದ್ದ ಕಾಯಿಗಳು ತಿಳಿಗೆಂಪು ಬಣ್ಣಕ್ಕೆ ತಿರುಗಿದ್ದವು. ಇನ್ನೂ ಮುಂದೆ ರಬ್ಬರ್ ತೋಟಗಳು. ಸುಮಾರು 40-50 ಅಡಿ ಎತ್ತರದ ಈ ದೊಡ್ಡ ಮರಗಳು ನೆಲಕ್ಕೆ ಬಿಸಿಲೇ ತಗಲದಂತೆ ಮರೆ ಮಾಡಿಟ್ಟಿದ್ದವು. ಈ ಮರಗಳ ಕಾಂಡದ ಒಂದು ಸುತ್ತು ತೊಗಟೆಯನ್ನು ತೆಗೆದು ರಬ್ಬರ್ ಹಾಲನ್ನು ಶೇಖರಿಸಲು ವ್ಯವಸ್ಥೆ ಮಾಡಿದರು. ಈ ಹಾಲು ಜಿನುಗುವುದು ತುಂಬಾ ನಿಧಾನ. ಈ ರಬ್ಬರ್ ತೋಟವನ್ನು ದಾಟಿದಮೇಲೆ ಪುನಃ ಅದೇ ತೊರೆ ಸಿಕ್ಕಿತು. ಇದನ್ನು ದಾಟಿದ ಮೇಲೆ ಹಿಂದಿನ ದಿನ ನೋಡಿದ್ದ ಹಳ್ಳಿ ಹೆದ್ದಾರಿ. ಟೀ ತೋಟಗಳು, ಈ ಮಾರ್ಗವಾಗಿ ಪ್ರವಾಸೀಮಂದಿರಕ್ಕೆ ಹಿಂದಿರುಗಿದಾಗ ಒಂಬತ್ತೂವರೆ.

ಅಷ್ಟು ಹೊತ್ತಿಗೆ ಎಲ್ಲರಿಗೂ ಗೌಹಾತಿಗೆ ಹಿಂದಿರುಗುವ ಸಂಭ್ರಮ. ಶ್ರೀ ಸ. ಎಲ್ಲಿಂದಲೋ ಒಂದು ಹುಲಿ ಉಗುರನ್ನು ಸಂಪಾದಿಸಿದರು. ಕಾಜಿರಂಗ ನ್ಯಾಷನಲ್ ಪಾರ್ಕ್‌ನಲ್ಲಿ ಕೆಲವು ಹುಲಿಗಳೂ. ಚಿರತೆ. ಕಾಡಾನೆ. ಕಾಡುಹಂದಿ ಇತ್ಯಾದಿ ಪ್ರಾಣಿ ಗಳೂ ಇವೆಯಂತೆ. ಕಾಣುವುದು ಅಪರೂಪ 430 ಚ. ಕಿ. ಮಿ ಆ ದೊಡ್ಡ ಕಾಡಿ ನಲ್ಲಿ ಪ್ರವಾಸಿಗಳಿಗೆ ತೋರಿಸುವುದು ಸೀಮಿತವಾದ ಭಾಗ ಮಾತ್ರ.

ಪ್ರವಾಸೋದ್ಯಮ ಇಲಾಖೆಯ ಬಸ್ಸು ಹತ್ತೂವರೆಗೆ ಗೌಹಾತಿಗೆ ಹೊರಟಿತು. ಡ್ರೈವರು ಮತ್ತು ಕಂಡಕ್ಟರು ನಾಲ್ಕಾರು ಜನ ಹೊಸ ಪ್ರಯಾಣಿಕರಿಗೆ ಬಹಳ ಉದಾರ ಮನಸ್ಸಿನಿಂದ ಜಾಗಮಾಡಿ ಕೊಟ್ಟರು-ಅವರ್‍ಯಾರಿಗೂ ಟಿಕೆಟ್‌ಕೊಡುವ ತೊಂದರೆ ತೆಗೆದುಕೊಳ್ಳಲಿಲ್ಲ.

ಹಿಂದಿನದಿನವೇ ನಿಗದಿಪಡಿಸಿದ್ದಂತೆ ನವಗಾಂವ್‌ನ ಪ್ರವಾಸೀ ಮಂದಿರದಲ್ಲಿ ಊಟ. ಸ್ವಚ್ಛ ಹಾಗೂ ಶಾಂತ ವಾತಾವರಣ. ಮೇಜಿನ ಮೇಲೆ ನಮ್ಮ ಹೆಸರಿನ ಚೀಟಿ ಗಳನ್ನು ಸಹ ಬರೆದು ಇಟ್ಟಿದ್ದರು ಶಾಖಾಹಾರಿಗಳಿಗೆ ಅನ್ನ, ದಾಲ್ (ಬೇಳೆ), ಸಬ್ಜೀ (ತರಕಾರಿ), ಬದನೆಕಾಯಿಭಜಿಯಾ ಮತ್ತು ಮೊಸರು ಒಂದು ಗಂಟೆಗೆ ಅಲ್ಲಿಂದ ಹೊರಟೆವು. ಅದೇ ಗುಡ್ಡ ಗಾಡಿನ ರಸ್ತೆ. ಕಾಡಿನಂತೆ ಬೆಳೆದ ಬಾಳೆಯ ಗಿಡಗಳು, ಅಡಿಕೆ ತೋಟಗಳು ಎಲ್ಲೆಲ್ಲೂ ಹಸಿರು ಸಧ್ಯ ! ಬಾಳ್ ಠಾಕ್ರೆ ಪ್ರಭಾವ ಇಲ್ಲೀವರ್ಗೆ ಇಲ್ಲ. ಹಾಗಿದ್ದೆ ಇದ್ರೆ ಈ ಹಸಿರಿಗೆಲ್ಲಾ ಕೇಸರಿ ಬಣ್ಣ ಬಳಿಸಿಬಿಡ್ತಿದ್ನೇನೋ.

ಗೌಹಾತಿ ತಲುಪುವ ಹೊತ್ತಿಗೆ ಸಂಜೆ ನಾಲ್ಕು ಗಂಟೆ. ಇಳಿಯುವಾಗ ಕಂಡಕ್ಟರ ನಲ್ಲಿ ಉಳಿದದ್ದು ಎರಡು ಬಾಟಲಿಗಳಾದರೆ ನಮಗೆ ಕೇವಲ ಹಸಿರು ನೆನಪುಗಳು.

ಇದ್ಯಾಕ್ಹೀಗೇಂತೀನಿ

–ವಿಜಯಾ ಸಚ್ಚಿದಾನಂದ

ನಾನ್ಯಾವಾಗ್ಲೂ ಹಾಗೇನೇ ನೋಡಿ. ಸದ್ಯ ! ಆಟೋದೋನು ನಾನು ಹೇಳಿದ ಕಡೆಗೆ ಬರೋಕ್ಕೆ ಒಪ್ಪಿದ್ನಲ್ಲಾ ಅನ್ನೋ ಸಂತೋಷದಲ್ಲಿ ಅವನು ಮೀಟರ್ ಡೌನ್ ಮಾಡಿದ್ನೋ ಇಲ್ವೋ ಅಂತ ನೋಡ್ಕೊಳ್ಳೋದನ್ನೂ ಮರೆತು ಬಿಡ್ತೀನಿ. ಅದೂ ಅಲ್ಲದೆ ಅವನ ಮೇಲೆ ಅನುಮಾನ ಪಟ್ರೆ ಅವನೇನಂದುಕೊಂಡುಬಿಡ್ತಾನೋ ಅನ್ನೋ ಭಯ ಬೇರೆ. ಅತಿಥಿಗಳು ಹೋದೋರ ಮನೆ ಡ್ರಾಯಿಂಗ್ ರೂಮಿನಲ್ಲಿ ಭರ್ಜರಿಯಾಗಿ ಸೋಫಾಗಳ ಮೇಲೆ ವಿರಾಜಿಸೋಲ್ವೇ ಹಾಗೆ ಆಟೋ ಸೀಟಿನ ಮೇಲೆ ವಿರಾಜಿಸಿಬಿಡ್ತೀನಿ. ಸ್ವಲ್ಪ ದೂರ ಪ್ರಯಾಣ ಮಾಡ್ತಿದ್ದ ಹಾಗೆ ಮೀಟರಿನ ಪತ್ತತ್ತು ಪೈಸೆ ಸೆಕೆಂಡಿಗೆ ಹತ್ತು ಸಲದಂತೆ ಮೇಲೇರುತ್ತಲ್ಲಾ ಅವಾಗ "ಏನಪ್ಪಾ ! ಮೀಟರ್‌ನ ಡೌನ್ (down) ಮಾಡಿದ್ದೆ ತಾನೇ' ಅಂತ ಕೇಳೋ ಪದ್ಧತಿ. ಅವನು 'ಹೂ' ಅಂತ ಅರ್ಥ ಬರೋ ಹಾಗೆ ಕತ್ತನ್ನ ಗುಂಡಿಗೆ ಸುತ್ತುತ್ತಾನೆ ಅನ್ನಿ. ಆವಾಗ ಏನೋ ಒಂದು ತರಹ ಸಮಾಧಾನ. ಪುನಃ ಹಾಗೇ ಆರಾಮವಾಗಿ ಕುಳಿತು ಬಿಡ್ತೀನಿ. ಅವನು ಸುತ್ತಿ ಬಳಸಿ ಹೇಗೆ ಬೇಕಾದರೂ ಕರೆದುಕೊಂಡು ಹೋಗಲಿ. ನಾನಂತೂ ಚಾ, ಚೂ ಅನ್ನೋಳಲ್ಲಾ. ಅವತ್ತೂ ಹಾಗೇನೇ. ಸ್ವಲ್ಪ ದೂರ ಹೋಗ್ತಿದ್ದಹಾಗೇ ಯಥಾಪ್ರಕಾರದಂತೆ "ಏನಪ್ಪಾ ! ಮೀಟರ ಡೌನ್ ಮಾಡಿದ್ದೀಯಾ ?" ಅಂದೆ. ಉತ್ತರವಿಲ್ಲ. ಹ್ಯಾಂಡ್ ಬ್ಯಾಗ್‌ನಲ್ಲಿ ಏನೋ ಹುಡುಕುತ್ತಾ ಇದ್ನಲ್ಲಾ ಆದ್ದರಿಂದ ಕತ್ತು ಬಗ್ಗಿಸಿಕೊಂಡೆ ಪುನಃ ಪ್ರಶ್ನೆ ಹಾಕಿದೆ. ಉಹೂ ಪುನಃ ಉತ್ತರವಿಲ್ಲ, ಸಧ್ಯ ! ನನ್ನ ಗ್ರಹಚಾರಕ್ಕೆ ಇವನೇನಾದ್ರೂ ಕಿವುಡನೋ ಅಂತ ಗಾಬರಿಯಾಯ್ತು. ಮಾಡ್ತಾಯಿದ್ದ ಕೆಲ್ಸ ಬಿಟ್ಟು ಕತ್ತೆತ್ತಿ ನೋಡ್ತೀನಿ ಮುಂದಿನ ಕನ್ನಡಿಯಿಂದ ನನ್ನನ್ನು ದುರುಗುಟ್ಟಿಕೊಂಡು ಕೆಂಪ್ರುಕಣ್ಣು ಮಾಡ್ಕೊಂಡು ತಿಂದು ಹಾಕಿ ಬಿಡೋ ಹಾಗೆ ನೋಡ್ತಾಯಿದ್ದಾನೆ. ನನ್ನ ಕಣ್ಣುಗಳು ಅವನ ಕಣ್ಣುಗಳನ್ನು ಸಂಧಿಸಿತಲ್ಲಾ ಆಗ ತನ್ನ ಹುರಿಮೀಸೆ ಮೇಲೆ ಬೇರೆ ಕೈ ಆಡಿಸಿದ. ಎಲ್ಲೋ ದರೋಡೆ ಕಾರನ ಕೈಗೆ ಸಿಕ್ಹಾಕಿಕೊಂಡು ಬಿಟ್ಟನೇನೋ ಅನ್ನೋ ಭಯವಾಯ್ತು. ಎದೆ ಢವ ಢವ ಅನ್ನೋಕ್ಕೆ ಬೇರೆ ಶುರು. ಆಟೋಮ್ಯಾಟಿಕ್ಕಾಗಿ ನನ್ನ ಕೈ ಕತ್ತಿನ ಮೇಲೆ ಹೋಯ್ತು. ಇಲ್ಲಾ ! ಉಮಾಗೋಲ್ಡಿನ ಎರಡೆಳೆ ಅವಲಕ್ಕಿ ಚೈನನ್ನ ಹಾಕ್ಕೊಂಡಿರಲಿಲ್ಲ. ಹೊರಡೋ ಆತುರದಲ್ಲಿ ಅಲ್ಲೇ ಹಾಸಿಗೆ ಮೇಲೆ ಮರೆತು ಬಂದು ಬಿಟ್ಟಿದ್ದೆ. ಅದಕ್ಕಾಗಿ ಈವರೆಗೆ ಮನಸ್ಸಿನಲ್ಲೇ ಪೇಚಾಡ್ತಾಯಿದ್ದೆ ಸಹ. ಅಷ್ಟರಲ್ಲಿ ಈ ಸಿನೆಮಾಗಳಲ್ಲಿಒಂದು ತರಹ situation create ಮಾಡ್ತಾರೆ ನೋಡಿ ಹಾಗೇ ಒಬ್ಬ ಸೈಕ್ಲಿಸ್ಟ್ ನಮ್ಮ ಆಟೋಗೆ ಡಿಕ್ಕಿ ಹೊಡ್ಯೋ ತರಹ ಅಡ್ಡ ಬರೋದೆ ! ಡ್ರೈವರಿನ ಕೋಪ ನೆತ್ತಿಗೇರಿತು.

"ಏನೋ ಬದ್ಮಾಷ್ ! ಅಡ್ಡ ಬರ್‍ತೀಯೇನೋ ! ಏನಂದು ಕೊಂಡಿದ್ದಿ ನನ್ನ ! ಕೊಡ್ತೀನಿ ನೋಡು ನಾಕು ಏಟು ! ಹುಷಾರ್ !" ಅಷ್ಟೋತ್ತಿಗಾಗ್ಲೆ ಸೈಕ್ಲಿಸ್ಟ್ ಮುಂದೆಲ್ಲೊ ಹೊರಟು ಹೋಗಿದ್ದ. ಆದ್ರೂ ಅದೇ ದಾಟೀಲೇ ಇವನು ಕೂಗ್ತಾನೇ ಇದ್ದಾನೆ. "ಮೋಟರ್ ಡೌನ್ ಮಾಡಿದ್ದೀಯಾ ! ಮಾಡಿದ್ದೀಯಾಂತೆ ! ನಾವೆಲ್ಲಾ ಇವರನ್ನ ಮರ್ಯಾದೆಯಿಂದ ಹೋಗಿ ಬನ್ನೀಂತ ಮಾತಾಡ್ಸೋದು. ಇವರು ಮಾತ್ರ ನಮ್ಮನ್ನೆಲ್ಲಾ ಬೇಕಾಬಿಟ್ಟಿ ಮಾತಾಡ್ಸೋದೇ! ಶುದ್ಧ ಅನಾಗರೀಕರು" ಅಂತ ಧ್ವನಿ ಏರಿಸಿ ಕೂಗಿದ್ದಲ್ಲದೆ ಕ್ಯಾಕರಿಸಿ ಬೇರೆ ಉಗಿದಿದ್ದ. ಓಹೋ ! ಇದಕ್ಕೋ ಇವನು ಹೀಗೆ ಆವಾಗಿನಿಂದ ದುರುಗುಟ್ಟಿಕೊಂಡು ನೋಡ್ತಾಯಿರೋದು. ಅವನು ಬೈತಾಯಿದ್ರೆ ತೆಪ್ಪಗೆ ಮುದುರಿ ಕುಳಿತಿದ್ದೆ

ಅದೇ ಸಮಯದಲ್ಲೆ ಟಕ್ ಅಂತ ಜ್ಞಾಪಕಕ್ಕೆ ಬಂದಿದ್ದು ನಾನು ಆವಾಗಿನಿಂದ ಹ್ಯಾಂಡ್ ಬ್ಯಾಗಿನಲ್ಲಿ ಹುಡುಕುತಾ ಇದ್ದನಲ್ಲಾ-ಹಣ ಇಟ್ಕೊಳ್ಳೊ ನನ್ನ ಪುಟ್ಟ ಪರ್ಸ್-ಅದನ್ನ ಉಮಾ ಗೋಲ್ಡ್‌ನ ಎರಡೆಳೆ ಅವಲಕ್ಕಿ ಚೈನಿನ ಜೊತೇನೆ ಮನೇಲೆ ಮಂಚದ ಮೇಲೆ ಮರೆತು ಬಂದು ಬಿಟ್ಟಿದ್ದೇಂತ. ಇನ್ನೇನು ಗತಿ ? ದೂರದ ಪದ್ಮನಾಭ ನಗರಕ್ಕೆ ಹೋದ್ದಾಗೆ-ಹ್ಯಾಂಡ್ ಬ್ಯಾಗನ್ನ ಎಷ್ಟು ಗೂರಾಡಿದ್ರೂ ಸಿಕ್ಕಿದ್ದು ಯಾವಾಗ್ಲೊ ಇಟ್ಟಿದ್ದ ಹದಿನೈದು ಚಿಲ್ಲರೆ ಮಾತ್ರ. ಇನ್ನೇನು ತಾನೇಮಾಡೋದು ? ಅಲ್ಲೇ ಇಳಿದು ಬಿಡೋಣಾಂತ

"ದಯವಿಟ್ಟು ಇಲ್ಲೇ ನಿಲ್ಲಿಸಿ ಬಿಡೀಪ್ಪ ! ನಾನು ಇಲ್ಲೇ ಇಳೀಬೇಕು. ಏನೋ ಕೆಲ್ಸ ಜ್ಞಾಪಕ ಬಂತು." ಜೋರಾಗಿ ಕೂಗಿದ್ದೆ. ಉತ್ತರವಿಲ್ಲ. ಆಟೋ ಭರ್ರಂತ ಮುಂದೆ ಹೋಗ್ತಾನೇ ಇತ್ತು.

"Pleace ನಿಲ್ಲಿಸಿ ಬಿಡ್ರಿ." ಒಂದು ತರಹ ಅಳೋ ರಾಗದಲ್ಲೇ ಬೇಡಿ ಕೊಂಡಿದ್ದೆ. ನಿಲ್ಲಿಸ್ದ. ಒಳ್ಳೆ ಜನ ಸಂದಣಿ ಇದ್ದ ಜಾಗದಲ್ಲಿ. ಅವನು ಬ್ರೇಕು ಹಾಕಿದ ರಭಸಕ್ಕೆ ಅವನ ಬೆನ್ನಿಗೆ ಡ್ಯಾಷ್ ಹೊಡಿಯೋದನ್ನ ಕಷ್ಟ ಪಟ್ಟು ತಪ್ಪಿಸಿ ಕೊಂಡಿದ್ದೆ.

"ಹೂ ! ಇಳೀರಿ ಇನ್ನು. ಎಲ್ಲಿ ಇಳೀಬೇಕೂಂತ ಮೊದಲೇ ಸರಿಯಾಗಿ ಹೇಳೊಕೆ ಏನು ? ಒಳ್ಳೆ ತರಲೆ ಸವಾರಿ ! ಶುದ್ಧ ಹಳ್ಳಿ ಸಹಸವಾ" ! ಅಂತ ಬೈತಾ ಹುಕುಂ ಮಾಡಿದ. ಆ ಜನ ಸಂಧಣಿಯಿಂದ ಯಾರೋ ಒಬ್ಬಿಬ್ಬರು ಕಿಸಕ್ ಅಂತ ನಕ್ಕಾಗೆ ಬೇರೆ ಕೇಳ್ಸಿತು.

ನನ್ನ ಹಳ್ಳಿ ಅನ್ನೋದೆ ಅವನು, ಒಳ್ಳೆ ಆಧುನಿಕತೆಯ ಕುರುಹು ಅಂದು ಕೊಂಡಿರೋ ನನ್ನನ್ನು ! ನಾನೇ ಏನು ! ನನ್ನ ನೋಡಿದ್ರೆ ನೀವೂ ಹಾಗೇ ಅಂತೀರಾ !

ಆದ್ರೆ ನಾನು ಸುಮ್ನೆ ಬಿಡ್ತೀನ್ಯೆ ? ಆವನ ಮೇಲೆ ಸರಿಯಾಗಿ ಸೇಡು ತೀರಿಸಿ ಕೊಂಡಿದ್ದೆ ಹೇಗೆ ಅಂತೀರೋ ? ಆಟೋ ಇಳಿದ ತಕ್ಷಣ ಅಲ್ಲೇ foot path ಮೇಲೆ ಹಣ್ಣು ಮಾರ್ತಾ ಕೂತಿದ್ದೋನನ್ನ ಹಣ್ಣಿನ ಬೆಲೆ ಎಷ್ಟೆಂದು ಅಪ್ಪಟ ಇಂಗ್ಲೀಷಿನಲ್ಲಿ ವಿಚಾರಿಸಿದೆ. ಅದೂ ಅಲ್ಲದೆ ಕಿಸಕ್ ಅಂತ ನಕ್ಕೋರ ಬಾಯೂ ಮುಚ್ಚಿಸ ಬೇಕಾಗಿತ್ತಲ್ಲ !

ಅಷ್ಟೆ ಅಲ್ಲಾ !

ನಮ್ಮನೆ ಹತ್ರ ಪುಟ್ಟ ದೇವಸ್ಥಾನ ಇದೆ. ಅದರ ಮುಂದೆ ಒಬ್ಳು ಹೂವು ಮಾರೋಳು ಕೂತ್ಕೊತಾಳೆ. ಅವಳಿಗೂ ನನಗೂ ಕೊಂಚ ಅಷ್ಟಕ್ಕಷ್ಟೇ. ಅವಳು ತುಂಬಾ ದುಬಾರಿ ಅಂತ ನಾನು. ನಾನು ಚೌಕಾಸಿ ಮಾಡೋಳು ಅಂತ ಅವಳಿಗೆ ಹೀಗೆ ನಮ್ಮಲ್ಲಿ ವ್ಯವಹಾರವೇ ಇಲ್ಲ ಅನ್ನಿ.

ಒಂದು ದಿನ ಆ ಕಡೆ ಹೋಗ್ತಾ ನೋಡ್ತೀನಿ ಹೂವಿನ ಬುಟ್ಟಿ ಹತ್ರ ಹೂವಾಡಿ ಗಿತ್ತಿ ಇರದೆ ಅವಳ ಮಗ ಕೂತಿದ್ದ. ಸುಮಾರು 8-10 ವರ್ಷದೋನಿರಬಹುದು. ನನ್ನ ಜೀವನದಲ್ಲಿ ನನಗಿರುವುದೊಂದೇ ಆಕಾಂಕ್ಷೆ. ದೇಶದ ಅನಕ್ಷರಸ್ಥರನ್ನೆಲ್ಲಾ ಶಿಕ್ಷಿತ ರನ್ನಾಗಿ ಮಾಡಿ ಜೀವನದಲ್ಲಿ ಸಾಧನೆ ಮಾಡಬೇಕೆಂದು. ಇಂತಹವರೆಲ್ಲಾ ನನಗೆ ಅನಕ್ಷರಸರಾಗಿಯೇ ಕಾಣ್ತಾರೆ. ಆವನ್ಹತ್ರ ಹೋಗಿ “ನಾಳೆಯಿಂದ ನಮ್ಮನೆಗೆ ಬಾರೋ ಮರಿ. ನಿನಗೆ ಪಾಠ ಹೇಳಿ ಜಾಣನನ್ನಾಗಿ ಮಾಡ್ತೀನಿ” ಆಹ್ವಾನವಿತ್ತೆ. ಅದೇ ಕ್ಷಣ ಎಲ್ಲಿದ್ದಳೋ ಹೂವು ಮಾರೋಳು ನನ್ನ ಮುಂದೆ ಬಂದು ನಿಂತ್ಕೊಂಡು ನನ್ನ ದುರುಗುಟ್ಟಿಕೊಂಡು ನೋಡಿದಳಲ್ಲದೆ ಮಗನ ತಲೆ ಮೇಲೆ ಮಟ್ಟಿ “ಒಂದ್ನಿಮಿಷ ಬಿಟ್ಟು ಹೋದ್ರೆ ಮಾಡ್ತೀಯಲ್ಲಾ ತರಲೆ ಕೆಲ್ಸ. ಕಮ್ಮಿ ಬೆಲೆಗೆ ಕೊಟ್ಟಿಟ್ಟೆ ತಾನೇ” ಅಂದ್ಲು. ನಾನು ಓಟ ಕಿತ್ತಿದ್ದೆ ಅಲ್ಲಿಂದ.

ಮಾರನೆ ದಿನ ಅದೇ ದಾರೀಲಿ ಬರ್ತಿದ್ರೆ “ಸ್ವಲ್ಪ ಇಲ್ಬನ್ನೀಮ್ಮ” ಹೂವಾಡಿಗಿತ್ತಿ ಜೋರಾಗಿ ಕರೆದಿದ್ದಳು. ಪುಂಗಿ ನಾದಾನೇ ಅನುಸರಿಸಿ ಹಾವು

ಹೋಗೊಲ್ಲ್ವೇ ಹಾಗೇ ನಾನು ಅವಳು ಕರದೇಟಿಗೆ ಅವಳ ಮುಂದೆ ಹೋಗಿ ನಿಂತಿದ್ದೆ. (ಈಗ ಯೋಚನೆ ಮಾಡಿದ್ರೆ ಅದ್ಯಾಕೆ ಹಾಗೆ ಅವಳು ಕರದೇಟಿಗೆ ಹೋಗಿದ್ದೆ ಅಂತ ಆಶ್ಚರ್ಯ ಆಗುತ್ತೆ)

"ನಮ್ಮ ಹುಡುಗನಿಗೆ ಪಾಠ ಹೇಳ್ಕೊಡ್ತೀನೀಂತ ಅಂದ್ರಂತೆ ನಾಳೆಯಿಂದ ನಿಮ್ಮ ಮನೆಗೆ ಕಳಿಸ್ತೀನಿ. ಚೆನ್ನಾಗಿ ಹೇಳ್ಕೊಡಿ ಈವಾಗ ಹೇಳ್ಕೊಡೋವಯ್ಯ ನೂರು ರೂಪಾಯಿ ತೊಗೋತಾನೇ. ಆದ್ರೂ ಚೆನ್ನಾಗಿ ಹೇಳ್ಕೊಡೋಲ್ಲ" ಗುಡುಗಿದ್ದಳು.

ಅವಳ ಹಿಂದೆ ನಿಂತಿದ್ದ ಜೀನ್ಸ್ ಮತ್ತು I Love Arizona ಟೀ ಷರ್ಟ್‌ಧಾರಿ 'ನೀನು ಹೇಳ್ಕೊಡದೇ ಇದ್ರೆ ನೋಡು ಏನ್ಮಾಡ್ತೀನಿ' ಅನ್ನೊ ಭಂಗೀಲಿ ಮಿಲ್ಟ್ರಿ ಮೀಸೆ ತಿರುಚಿದ್ದ. ಆಗ್ಲೆ ನನಗೆ ಗೊತ್ತಾಗಿದ್ದು ಆ ಹುಡುಗ ನಿರಕ್ಷರಕುಕ್ಷಿಯಲ್ಲ ಯಾವುದೋ ದೊಡ್ಡ donation ಸ್ಕೂಲಿನಲ್ಲಿ 5ರ ವಿದ್ಯಾರ್ಥಿಂತ. ಏನೂ ಉತ್ತರ ಕೊಡದೆ ಬಂದಿದ್ದೆ.

ನಮ್ಮ ಮನೆ ಕೆಲಸದ ಚಿನ್ನಮ್ಮ ಬಂದಾಗ ಕಷ್ಟ ಸುಖ ಹೇಳ್ಕೊಳ್ಳೊ ಹಾಗೆ "ನೋಡೇ ! ನಾನು ಬರ್‍ತಾಯಿದ್ದಾಗ ಆ ಹೂವಿನ ಹೆಂಗ್ಸು ನನ್ನ ಹೇಗೆ ಕರೆದ್ಲೂಂತೀಯಾ ! ಅವಳಿಗೇನೂ ಮರ್ಯಾದೆ ಇಲ್ವೇನೆ. ನನನ್ನು ಏನೆಂದುಕೊಂಡಿದ್ದಾಳೆ !" ಅಂತ ಕೋಪದಿಂದ ಕೂಗಿದೆ.

"ಅಯ್ಯೋ ! ನೀವ್ಯಾಕಮ್ಮಾ ಅವಳ ಕೂಡ ಬಾಯಿ ಹಾಕೋದು. ಅವಳಿಗೆ ಮಾನಾಮರ್ಯಾದೆ ಒಂದೂ ಇಲ್ಲ. ಆ ವಯ್ಯ ಅವಳ ಜೊತೆಗಿರೆನೂ ಅವಳ ಗಂಡನೂ ಅಲ್ಲ ಏನೂ ಅಲ್ಲ ಅವನು........." ಗಡದ್ದಾಗಿ ಬೆಳಗಿನ ತಿಂಡಿ ತಿಂದು ನಿದ್ರೆ ಹೊಡಿತಾಯಿದ್ದ ನಮ್ಮೆಜಮಾನರ ರೂಮಿನ ಕಡೆ ಭರತ ನಾಟ್ಯಂ ಭಂಗಿಯಲ್ಲಿ ಕಣ್ಣು ಹೊರಳಿಸುತ್ತಾ, ಪಿಸಿ ಪಿಸಿ ಅಂತ ಏನೋ ಹೇಳಿದಳು. ಜೊತೆಗೆ ಅವಳ ಕೈನಲ್ಲಿದ್ದ ಪರಕೆ ಚಾಮರದ ಕೆಲಸ ಮಾಡ್ತಾಯಿತ್ತು.

ಡೈನಿಂಗ್ ಕುರ್ಚಿ ಮೇಲೆ ಕುಳಿತಿದ್ದ ನನಗೆ ಅವಳು ಏನು ಹೇಳಿದಳು ಅಂತ ಏನೂ ಅರ್ಥವಾಗಿರಲಿಲ್ಲ.

"ಅದೇನು ಹೇಳ್ತೀಯೋ ಸರಿಯಾಗಿ ಹೇಳೆ! ಸುಮ್ನೆ ಪಿಸುಗುಟ್ಬೇಡ." ಅಲವತ್ತಿದ್ದೆ. (ಥೂ! ಆ ಹೂವಿನೋಳು ಕರೀತಿದ್ದ ಹಾಗೇ ನಾನ್ಯಾಕೆ ಹಾಗೆ ಓಡಿದ್ದೆ ಅನ್ನೋ ಹುಳು ನನ್ನ ತಲೇ ತಿನ್ನುತ್ತಾ ಇತ್ತು.

"ಅಯ್ಯೋ! ಹೋಗೀಮ್ಮಾ! ನೀವೊಂದು ಹಳ್ಳೀ ಮುಕ್ಕ! ನಿಮಗೇನೂ ಅರ್ಥವೇ ಆಗೋಲ್ಲವಲ್ಲಾ!" ಅಂತ ತನ್ನ ಕೆಲಸ ಮುಂದುವರೆಸೂಕ್ಕೆ ಹೊರಟು ಹೋಗಿದ್ದಳು.

ಅದಕ್ಕೇ ಕೇಳ್ತಿದ್ದೀನಿ "ಇದ್ಯಾಕ್ಹೀಗೇಂತ"

ಮೂರು ಚುಟಿಕಗಳು

ವಿಕಟಕವಿ

ಗಾಂಧಿ ತಾತ ಹೇಳ್ಕೊಟ್ಟಿದ್ದು
ಚರಕಾ, ಹತ್ತಿ, ನೂಲು!
ಈಗ ದೇಶ್ದಲ್ ಕೇಳೋ ಮಾತು
ತತ್ತಾ ನನ್ ಮಾಮೂಲು।

ಸರ್ಕಾರದ ಗಾಲಿಯೋ
ಬಹುಮಂದ.........ಗಮನ।
ಅದ ಸ್ಪೀಡಿಸಲು ಬೇಕು
ಲಂಚ ಅನ್ನೋ......ಇಂಧನ!

ಪುಢಾರಿಗಳಿಗೇಕೆ ಈ
.........ರಾಜಕೀಯ?
ಬಲ್ ಬೇಗ ಭದ್ರಮಾಡ್ತಾರೆ ತಿಜೋರಿ Key ಯ!

ಸರಪಣಿ ಜಗ್ಗುವವರು

ಲೆ : ಬಿ. ನ. ನರಹರಿ

ಬಹುರೂಪ, ಸಹಸ್ರನಾಮಧಾರಿ, ಅತಿ ಜಂಟಿ "ತ್ರೀ ಇನ್ ಒನ್ ಕಲರ್ ವಾಷಿಂಗ್ ಮೆಷಿನ್ ಕಂ ವೆಟ್‌ಗ್ರೈಂಡರ್ ವಿತ್ ಮಿಕ್ಸಿ ಬ್ಲೇಡ್ ಕಂಪ್ನಿ"ಯ 48 ಸೋಮವಾರ ವ್ರತದ ಪ್ರೊಡಕ್ಷನ್ ವಿಮರ್ಶೆ ಮಿಟಿಂಗ್ ಶುರುವಾಗಿತ್ತು. ತಿರುಗಾಲಿ ಈಸಿ ಚೇರ್‌ಲಿ ಜನರಲ್ ಮ್ಯಾನೇಜರ್ ಟಿನ್, ನಿವೃತ್ತ ಮೇಜರ್ ಜಯಪ್ಪನವರು. ಅವರ ಸರಿ ಸೀನಿಯಾರಿಟಿ ಸಂಖ್ಯೆ 25. ಸದಾ ನಂ ಟೆನ್ ಸಿಗರೇಟ್ ಸೇದಿ,ದ್ದರಿಂದ ಕಾರ್ಮಿಕರೇ ಅವರನ್ನು ಜಿ. ಎಂ. ಟಿನ್. ಮಾಡಿದರ್ರು. ಬಿಸಿ ರಕ್ತದ ಚಿಗುರು ಮ್ಯಾನೇಜರ್‌ಗಳಿಗೆ ಅವರು ಜನಮೇಜಯಪ್ಪ, ಮಿಲ್ಟ್ರಿ ಸೇವೆ ಮುಗಿಸಿ ಬಂದಾಗ ಇದ್ದ ದರ್ಪ, ಕೋಪ ಸಾಕಷ್ಟು ಇಳಿದಿತ್ತು, ದಿನಬಿಟ್ಟು ದಿನ ವರ್ಕರ್ಸ್ ಅವರಿಗೆ ಬೆವರಿಳಿಸಿ ಟ್ರೈನಿಂಗ್ ಕೊಟ್ಟ ಮೇಲೆ.

ಉತ್ಪಾದನೆ ಕಡಿಮೆಯಾಗಿದ್ದರೂ, ಚರ್ಚೆಯಕಾವು 40ಡಿಗ್ರಿ ಸೆಲ್ಸಿಯಸ್‌ಗೆ ಏರಿತ್ತು. ಎಲ್ಲ ಹೈಟೆಕ್ ಮ್ಯಾನೇಜರ್‌ಗಳು ಲೋ ಟೆಕ್ನಾಲಜೀಲಿ ಪರಸ್ಪರ ಕಾಲೆಳೆದು ದೂರಿದರು.

ಮೆಷಿನ್ ಶಾಪ್ ಮ್ಯಾನೇಜರ್ ಮುಂಡಣ್ಣ ನೇರವಾಗಿ, ಖಾರವಾಗಿ ಘಾಟೆಬ್ಬಿಸಿ ದರು.

"ಇನ್ಸ್‌ಪೆಕ್ಷನ್ ಗುಣವಂತರಾವ್‌ನ ತೃಪ್ತಿ ಪಡಿಸಕ್ಕೆ ನಮ್ಮ ಕೈಲಿ ಆಗಲ್ಲ, ಸಾರ್ ! ಸಣ್ಣ ಪುಟ್ಟ ವ್ಯತ್ಯಾಸ ತೋರಿಸಿ ನಾವು ಮಾಡಿದ್ದೆಲ್ಲ ಬ್ಲೇಡ್'ರಿಜೆಕ್ಟ್' ಇನ್‌ಸೆಂಟಿವ್ ಇಲ್ಲ ಅಂತ ವರ್ಕರ್ಸ್ ಬೊಂಬ್ಡಿ. ಹೀಗಾದ್ರೆ ಸ್ಕ್ಯಾಪ್ ಸೇಲ್ಸ್ ಗುರಿ ಸಲೀಸಾಗಿ ಮುಟ್ತೀವಿ ಅಷ್ಟೆ. ಪ್ಲಾನಿಂಗ್ ಕೊಡೋ ಕಚ್ಚಾವಸ್ತೂಲಿ ಹೆಚ್ಚಿನ ಕ್ವಾಲಿಟಿ ಸಾಧ್ಯವಿಲ್ಲ"

ಅರೆನಿದ್ರೆಯಿಂದ ಎಚ್ಚೆತ್ತ ಪ್ಲಾನಿಂಗ್ ಪರಮೇಶ್ವರನ್, ಕಷ್ಟಪಟ್ಟು ಕಣ್ಣಿನ ರೆಪ್ಪೆಬಡಿಯುತ್ತಿದ್ದ ಮೆಟೀರಿಯಲ್ಸ್ ಮ್ಯಾನೇಜರ್ ಮಹಾದೇವು ನಡುವೆ ಆದ

ಮಾತಿನ ಕತ್ತಿವರಸೆಯನ್ನು ಜಿ. ಎಂ. 10 ನಿಲ್ಲಿಸಿದರು. ಎಲ್ಲ, ಹಿಂದಿನ ಭಾನುವಾರದ ದೂರದರ್ಶನ ಮಹಾತ್ಮೆ.

ಜಿ. ಎಂ. 10 ಆಫೀಸಿಂದ ಗುಣವಂತರಾವ್‌ಗೆ ಕರೆ ಬಂದಾಗ ಅವರಿಗೆ ಆಶ್ಚರ್ಯವೇ ಆಗಲಿಲ್ಲ. 2-3 ದಿನಗಳಿಂದ ಅವರೇ ಕಾದಿದ್ರು, 'ಅಗ್ನಿ' ಪರೀಕ್ಷೆಗೆ, ಪತ್ನಿ ಸುಗುಣಮ್ಮ ಹಾಕ್ತಿದ್ದ ಗುಣಗಾನ ಕ್ಯಾಸೆಟ್ ಜಾಪಿಸಿ ಕೊಳ್ತ.

"ಅಲ್ರೀ ! ಪದಾರ್ಥಗಳ ಗುಣಮಟ್ಟ ಕಷ್ಟಪಟ್ಟು ಕಾಪಾಡ್ತಿದ್ದೀನಿ ಅಂತ ಸದಾ ಹೇಳ್ಕೊಳ್ತೀರಲ್ಲ, ನಿಮಗೇನು ಫಾಯಿದೆ ! ಸಿಂಗಾಪುರಕ್ಕೆ ಒಂದು ಟ್ರಿಪ್ ಸಹಾ ಇಲ್ಲ. ಸ್ಟಾರ್ ಹೋಟೆಲಿಗೆ ಒಂದು ಸೆಮಿನಾರ್‌ಗಾದ್ರೂ ಹೋಗಿ ಪ್ಲಾಸ್ಟಿಕ್ ಪೂರೆ ಲೆಟರ್ ಪ್ಯಾಡ್‌ನಾದ್ರೂ ಮಕ್ಕಳಿಗೆ ತಂದಿದೀರ? ನಿಮ್ಮ ಮಾರ್ಕೆಟ್ ರಿಸರ್ಚ್ ಮ್ಯಾನೇಜರ್ ಸಮವಸ್ತ್ರಧರನ್‌ನ ನೋಡಿ, ಬೆಳಗಾದ್ರೆ ಸ್ಟಡಿ ಟೂರ್, ಸಮಿನಾರ್ ಅಂತ ಭೂಗೋಳದಲ್ಲಿರೋ ದೇಶಗಳಲ್ಲಿ ಯಾವುದೂ ಬಿಡದೆ ಸದಾ ಹಾರಾಡ್ತಿರ್ತಾನೆ. ಪಿಂಕಿ ಒದೆಯೋದು ಪಶ್ಮಿನಾ ಶಾಲಂತೆ, ಬಂಟಿ ಬ್ಲೇಜರ್ ಬೆಲ್ಜಿಯಂದಂತೆ ! ಅವನ ಹೆಂಡ್ತಿ ಮಾತು ಕೇಳಿ ಕೇಳಿ ಸಾಕಾಗಿದೆ"

ಯಜಮಾನಿ ಹೇಳಿದ್ರಲ್ಲಿ ತಪ್ಪೇನಿಲ್ಲ ಅಂತ ಅನ್ನಿಸಿ 30 ವರ್ಷಗಳ ಸೇವಾ ಧುರೀಣ ಅಸಿಸ್ಟೆಂಟ್ ಇನ್‌ಸ್ಪೆಕ್ಷನ್ ಮ್ಯಾನೇಜರ್-75 ಗುಣವಂತರಾವ್ ತಕ್ಷಣ ಶಪಥ ಮಾಡಿದರು.

"ನಿಯಮಾವಳಿ ಪೂರ್ತಿ ಪಾಲಿಸಿ, ಐ. ಎಸ್. ಒ. ಸರಪಣಿ ಸರಳು ಇನ್ನು ಬಿಗಿಯಾಗಿ ಜಗ್ಗಿ. ಎಳೆದು, ಈ ಗುಣವಂತರಾವ್‌ನ ಇನ್ಮೇಲೆ ಉಪೇಕ್ಷೆ ಮಾಡೊಕ್ಕೆ ಸಾಧ್ಯವಿಲ್ಲ ಅಂತ ತೋರಿಸ್ತೀನಿ"

ಬಿ. ಪಿ. ಏರಿಸಿಕೊಳ್ತ ಮೀಟಿಂಗ್ ಲಿ ಕಾಲಿಟ್ಟರು, ಗುಣವಂತರಾವ್. ಶುರು ವಾಯಿತು, ನಿವೃತ್ತ ಮೇಜರ್ ಜಯಪ್ಪನವರ ಧಾಳಿ-ಪ್ರತ್ಯುತ್ತರ.

"ಗುಣವಂತ್, ನಿಮ್ಮ ಮೇಲೆ ಶಾನೆ ದೂರು ಬರ್ತಿದೆಯಲ್ಲಪ್ಪ"

"ಇನ್ಸ್‌ಪೆಕ್ಷನ್‌ಲಿರೋರಿಗೆ ಅದು ತಪ್ಪಿದ್ದಲ್ಲ ಸಾರ್ !"

"ಹಾಗಲ್ಲ, ಬಹಳ 'ಸ್ಟ್ರಿಕ್ಟ್' ಆಗಿ, ಬ್ಲೇಡ್ ಪಾಸ್ ಮಾಡ್ತಿಲ್ಲವಂತೆ"

"ಸಮವಸ್ತ್ರಧರನ್ ಜೊತೇಲಿ ನೀವು ಆಗ್ರ, ಡೆಲ್ಲಿ, ಲಂಡನ್, ನ್ಯೂಯೊರ್ಕ್ ಟೂರ್ ಮುಗಿಸಿ ಟಿಂಬಕ್ಟೂಲಿ ನಡೆದ ಕ್ವಾಲಿಟಿ ಸೆಮಿನಾರ್‌ನಿಂದ ಬಂದ ಮೇಲೆ ಹೇಳಿದ್ರಲ್ಲ ಸಾರ್-ಐ.ಎಸ್.ಒ. 9000 ಸರಣಿ ಕಟ್ಟು ನಿಟ್ಟಾಗಿ ಅನುಸರಿಸದೆ ಇದ್ರೆ ವಿಶ್ವದ ಮಾರುಕಟ್ಟೇಲಿ ಸ್ಪರ್ಧೆ ಅಸಾಧ್ಯ ಅಂತ, ಈಗ್ಲೂ ನೀವು ಒಪ್ಪಿಗೆ ಕೊಟ್ಟರೆ ಎಲ್ಲ ಪಾಸ್ ಮಾಡ್ಬಿಡ್ತೀನಿ." ನಿಯಮ ನಿಷ್ಠ, ಅ. ಇ. ಮ್ಯಾ 75 ಜಿ. ಎಂ. 10 ಮೇಲೆ 'ಅಗ್ನಿ' ಉಡಾಯಿಸಿ 'ಕಿಡಿ ಚೆಂಡೂ' ಒದ್ದರು. ನೇರ ನಿರ್ಧಾರ ಕೊಡಕ್ಕಾಗದೆ, ಉಸಿರು ಕಟ್ಟಿದರೂ ತೋರಿಸ್ಕೊಳ್ಳದೆ ಜಿ. ಎಂ. 10 ಉವಾಚ.

"ಹಾಗಲ್ಲ, ನಾನು ಹೇಳಿದ್ದು. ಮುಖ್ಯ ವಿಷಯ ಮರ್ತಿದೀರ, ನೀವು. ನಮ್ಮ ದೇಶದಲ್ಲಿ ಹೊಸ ರೀತಿ, ನೀತಿ ತರಬೇಕಾದ್ರೆ ಹಂತ ಹಂತವಾಗಿ ಮಾಡ್ಬೇಕು. ಇಲ್ಲದಿದ್ರೆ ಹೀಗೆ ಚೈನ್‌ಫುಲ್ ಮಾಡ್ಬಿಟ್ರೆ ಪ್ರೊಡಕ್ಷನ್ ಟ್ರೈನ್ ಧಿಡೀರ್ ಅಂತ ನಿಂತು ನಷ್ಟ, ಕಷ್ಟ. ನೀವು ಮಾಡ್ತಿರೋದು ತಪ್ಪು ಅಂತ ಹೇಳಲ್ಲ, ಆದರೆ ಅಂತಿಮ ಉತ್ಪಾದನೆ ಗುರಿ ?" ಅಲ್ಪ ಬಹುಮತ, ಪಕ್ಷದಲ್ಲೆ ಭಿನ್ನಮತೀಯರ ಕಾಟವಿದ್ದ, ಆದರೆ ಪಳಗಿದ್ದ ಮುಖ್ಯ ಮಂತ್ರಿಯಂತೆ ಮುಂದುವರಿದರು. "ನಿಮ್ಮ ಪರಿಸ್ಥಿತಿ ಅರ್ಥವಾಯ್ತು ಬಿಡಿ. ಬೇಗ ರೆಡಿಯಾಗಿ, ಬರುವ ಸೋಮವಾರದಿಂದ ಶ್ರೀನಗರ್‌ಲಿ 1 ತಿಂಗಳು ಐ. ಎಸ್. ಒ. 9000 ಸರಣಿ ವರ್ಕ್ ಶಾಪ್, ನಿಮ್ಮನ್ನು ನಾಮಿನೇಟ್ ಮಾಡ್ತಿದ್ದೀನಿ, ತಕ್ಷಣ ರೈಲಿಗೆ ರಿಸರ್ವ್ ಮಾಡಿಸ್ಕೊಳಿ, ಅಲ್ಲಿಂದ ಬಂದ ಮೇಲೆ ಶ್ರೀಲಂಕಾಗೂ ಹೋಗ್ಬೇಕಾಗಬಹುದು. ಸರಪಣಿ ಎಳೆದಿದ್ದಕ್ಕೆ ಈ ಪೆನಾಲ್ಟಿ, 2ತಿಂಗಳು ನಿಮ್ಮ ಸೆಕ್ಷನ್‌ನ 'ಸೆಲ್ಫ್ ಇನ್ಸ್‌ಪೆಕ್ಷನ್' ಜಾರಿಗೆ ತರಕ್ಕೆ ಹೇಳಿ ಮಂಡಣ್ಣಂಗೆ ವಹಿಸ್ತೀನಿ, ಪರವಾಗಿಲ್ಲ ತಾನೆ" ಎಂದು ತುಂಟನಗೆ ನಕ್ಕು, ಉತ್ತರಕ್ಕೆ ಕಾಯದೆ ಪಿ. ಎ. ಚಿತ್ರಗುಪ್ತನಿಗೆ 'ಆರ್ಡರ್' ಡಿಕ್ಟೇಟ್ ಮಾಡಿ ಎಂಜಿನ್‌ಗೆ ಕಾಫಿ ತುಂಬಿಸಿ, ರೈಲು ಬಿಟ್ಟರು ಮತ್ತೆ.

ತಕ್ಷಣ ಬಂತು, ಅಲ್ಲೇ ಇದ್ದ ಕಂಪ್ಯೂಟರ್ M. S. ಕುಮಾರಿಯಿಂದ ಮಾತಿನ ಮತಾಪು ಹೂಬಾಣ.

"ಆ ವರ್ಕ್ ಶಾಪ್ ಬದಲು ಊಟೀಲಿ ಸೆಮಿನಾರ್ ಇದ್ದಿದ್ರೆ ಅವರೇ ಹೋಗಿರೋರು. ಜನಮೇಜಯನ ಕಾಲದ ಡಿಗ್ರಿ, ಕಂಪ್ಯೂಟರ್ ಲಿಟರೇಟ್ ಸಹ ಆಗಿಲ್ಲ.

ಹೀಗಿದ್ರೂ ಘಾಟೀತನಕ್ಕೆ, ಜನರ ಮ್ಯಾನೇಜ್‌ಮೆಂಟ್ ಸ್ಟೈಲ್‌ಗಾದ್ರೂ ಜನಮೇಜಯಪ್ಪನವರಿಗೆ ಎಪ್ಲಸ್ ಕೊಡಬೇಕು, ಅಲ್ವೇನ"

ಅವರ ತುಂಟ ನಗೆ, ಮಿಂಚು ನೋಟದಿಂದ ಹಾಲ್ ಬೆಳಗಿತು. ತೂಕಡಿಸುತ್ತಿದ್ದವರು ಎದ್ದರು.

"ವಿತ್ರರಹಸ್ಯ"ದ ಅಪರಾಜಿತ ಅಂಕಣಕಾರನ "ಟಾಪ್ ಲೆಸ್ 300 ಖಾಯಂ ಖಾಯಿಲೆ ಪಟ್ಟಿ"ಯಲ್ಲಿದ್ದ ಬ್ಲೇಡ್ ಕಂಪ್ನಿ ಉತ್ಪಾದನೆ ಉಗಿ ಬಂಡಿ ಮೀಟಿಂಗ್ ಮಂದ ಗತಿಯಲ್ಲಿ ಹಾಗೇ ಮುಂದಕ್ಕೆ ಸರಿಯಿತು.

ನಾಳೆ ಬಾ

ಅ. ರಾ. ಸೇ.

(ಅಥವಾ ರಕ್ಕಸ ಬಿನ್ನ್ಯತೆ)

ಕನ್ನಡ ಜನಮನದ ಹೃದಯದಲ್ಲಿ ಅಚ್ಚೊತ್ತಿರುವ ಅದ್ವಿತೀಯ ನುಡಿಗಟ್ಟು, ಸದ್ಯಕ್ಕೆ ನಾಳೆ ಬಾ.

ಇದು ಕೊಗು ಮಾರಿಗೆ ಪ್ರತ್ಯಸ್ತ್ರ ಎಂದು ಕನ್ನಡಿಗರೆಲ್ಲರೂ ನಂಬಿದ್ದಾರೆ. ಮೂರು ನಾಮ ಹಾಕಿ ಕೆಳಗೆ ನಾಳೆ ಬಾ ಎಂದು ಬರೆಯುವುದು ಪೂರ್ಣ ಚಿಕಿತ್ಸೆ. ಕೊಗುಮಾರಿಗೆ ಕನ್ನಡವೊಂದೇ ತಿಳಿಯುತ್ತದೆ, ಎಂಬ ನಂಬಿಕೆಯಿಲ್ಲದ ಹಲವರು

ನಾಳೆ ಬಾ

Come Tomorrw

ಕಲ್ ಆನಾ

ಎಂದು ಮೂರು ಭಾಷೆಗಳಲ್ಲಿ ಬರೆದಿರುವುದು ವಿಚಾರಾರ್ಹ. ಇದರಿಂದ ಗಾಳಿಮಾರಿಯ ಮನೆ ಮಾತಾವುದು ಎಂಬ ಸೂಕ್ಷ್ಮಪ್ರಶ್ನೆ ಏಳುತ್ತದೆ.

ಮೇಲೆ ಕಂಡ ಎರಡು ಭಾಷೆಗಳಂತೂ ಕನ್ನಡಕ್ಕೆ ಸದ್ಯದಲ್ಲಿ ಅಪಾಯ ತರುತ ಲಿವೆ-ಜವಾಬುದಾರಿ ಕನ್ನಡಿಗರದೇ ಎಂದರೂ ಅಪಾಯ ತಪ್ಪಿಲ್ಲವಲ್ಲಾ !

ನೊನ್ನೆ ಕರ್ಣನಾಟಕದ ಬೂಂಟೌನ್ ರಾಜಧಾನಿಗೆ ಬಂದಿದ್ದೆವು. ರಾಷ್ಟ್ರದ ಅಗ್ರಮಾನ್ಯ ವೈಜ್ಞಾನಿಕ-ತಾಂತ್ರಿಕ ಸಂಸ್ಥೆಯೊಂದರಲ್ಲಿ ವಿಭಾಗ ಮುಃಖ್ಯನಾಗಿರುವ ನಮ್ಮ ಪುಡಿ ಚಿಲ್ರೆಯನ್ನು ನೋಡುವುದೇ ನಮ್ಮ ಉದ್ದೇಶ. ಮಹಾದ್ವಾರದ ಪಕ್ಕದಲ್ಲೇ ನಾಳೆ ಬಾ ಎಂದು ಬರೆದಿದ್ದರು. ವೈಜ್ಞಾನಿಕ ಮನೋಭಾವ ಯಾರಿಗೆ ಅಗತ್ಯ ಎಂಬ ಪ್ರಶ್ನೆ ಈಗಲೀಗ ತಲೆ ತಿನ್ನುತಲಿದೆ. ಸಂಸ್ಕೃತಿ ಇಲಾಖೆಯಲ್ಲೂ ಅದೇ.

ಇಡೀ ಕರ್ಣಾಟಕವನ್ನೇ ಜಾಗ್ರುತಗೊಳಿಸಿರುವ ಈ ಜ್ವಲಂತ ಸಮಸ್ಯೆಯನ್ನು ಮೂಢನಂಬಿಕೆ ಎಂದು ಕರೆಯುವುದು ವೈಜ್ಞಾನಿಕವೇ ? ವೈಜ್ಞಾನಿಕ ಎಂದರೇನು ?

ಈ ಸಮಸ್ಯೆಗೆ ನಮ್ಮ ಸುದರ್ಶನನ ಪತ್ರಿಕೆಯಲ್ಲಿ ಬಂದ ಒಂದು ಸುದ್ದಿ ಸುಳಿವು ಕೊಟ್ಟಿದೆ.

ಯಂತ್ರಗಳನ್ನುಪಯೋಗಿಸಿ ಕಾಡನ್ನು ಕಡಿದರೆ ಅದು ವೈಜ್ಞಾನಿಕ. ಕೊಡಲಿಯಿಂದ ಕಡಿದರೆ ಅದು ಅವೈಜ್ಞಾನಿಕ. ಇದರಂತೆಯೇ ಗುಡಿಯ ಮುಂದೆ ಕುರಿ ಕಡಿದರೆ ಹಿಂಸೆ ಮೂಢನಂಬಿಕೆ. ಕಸಾಯಿಖಾನೆಯಲ್ಲಿ ಫಡ್ಶಾ ಮಾಡಿದರೆ ಅದು ಹಿಂಸೆಯಲ್ಲ. ವೈಜ್ಞಾನಿಕ ಎಂದೇನಾದರೂ ಇರಬಹುದೇ ?

ನಮ್ಮ ಮನೆಗೆ ಹಾಲು ಕೊಡುವ ಮಾರಜ್ಜಿಗೆ ಎಪ್ಪತ್ತೈದು ವರ್ಷಗಳಿರಬಹುದು. ಆಕೆ ಕರ್ಣಾಟಕಾಂಧ್ರ ವಾಸಿ. ಅನಕ್ಷರಸ್ಥೆ ಆದುದರಿಂದ ಈ ಮೂಢ ನಂಬಿಕೆಯ ಬಗೆಗೆ ಅವಳಿಗೆ ಅಧಿಕೃತ ಜ್ಞಾನವಿರಬೇಕು. ಎಂದು ಕೇಳಿದಾಗ ಅವಳು ಹೇಳಿದುದನ್ನು ಇಲ್ಲಿ ದಾಖಲಿಸಿದ್ದೇವೆ.

"ಇದು ಗಾಳಿ ಮಾರಿ, ಕೂಗು ಮಾರಿ ಯಾವುದೂ ಅಲ್ಲ ಸ್ವಾಮೀ ರಕ್ಕಸ ಬಿದ್ದೈತೆ, ಇಗಳಪ್ಪ ಸ್ವಾಮಿ ನಟ್ಟ ನಡಾ ರಾತ್ರಿಗೆ ಅದು ಬಂದು ಮನೆ ಯಜಮಾನನ್ನ ಹೆಸರು ಹಿಡಿದು ಕೂಗ್ತೈತೆ, ಓ ಅಂತ ಅಂದ್ರೆ ರಕ್ತಕಾರಿ ಸಾಯ್ತಾನೆ. ಅದನ್ನೇ ಸ್ವಾಮಿ ರಕ್ಕಸ ಬಿದ್ದೈತೆ ಅನ್ನದು"

"ನೀನು ಹೇಳುವುದು ಅವೈಜ್ಞಾನಿಕ ಮೂಢನಂಬಿಕೆ ಅಂತರಲ್ಲ ಮಾರಜ್ಜಿ, ಯಾರಾರ ಹಂಗೆ ಸತ್ತಿರದನ್ನು ನೋಡಿದಿಯಾ ?"

"ಸ್ವಾಮೀ, ಪರಪಂಚ ದೊಡ್ಡದೈತೆ ? ಎಲ್ಲಾ ನೋಡಕ್ಕಾಕ್ಕತೇನ್ಸ್ವಾಮೀ ? ಅದು ಇಲ್ಲ ಅಂದರು ಪರಪಂಚನೆಲ್ಲಾ ಸುತ್ಗೆಂಡು ಎಲ್ಲರ್ನೂ ಕೇಳ್ಕೆಂಡು ಬಂದದರೇನ್ಸ್ವಾಮೀ ? ಜೀವಕ್ಕೆ ಸಂಚಕಾರ ಬಂದಾಗ ಮೂಡವೋ, ಇಗ್ನಾನವೋ ಎಲ್ಲಾ ಒಂದೇ ಅಲ್ಲೇನ್ಸಾಮೀ"

"ಅಜ್ಜೀ, ಈ ರಕ್ಕಸ ಯಾವಾಗ ಬೀಳ್ತತ್ತೆ ?"

"ಸ್ವಾಮೀ ಇದು ಹತ್ತೊರ್ಸಕ್ಕೆ, ಐದೋರ್ಸಕ್ಕೆ ಒಂದ್ಸತಿ ಬೀಳ್ತತೆ ನೋಡು, ನಂಗೆ ಗೊತ್ತಿದ್ದಂಗೆ ಇದು ಹತ್ತು ಹದಿನೈದ್ಸತಿ ಬಿದ್ದತೆ."

"ಹಂಗಾರೆ, ಇದು ಐದುವರ್ಷಕ್ಕೊಂದ್ಸಾತಿ ಬೀಳ್ತತೆ ಅನ್ನು."

"ಹಂಗೇನು ಇಲ್ಲ ಸ್ವಾಮಿ, ಇದು ಯಾವಾಗಾರ ಬೀಳಭೌದು" ನನಗೆ ಮಾರಜ್ಜ ಹೇಳಿದ್ದು ಅರ್ಥವಾಗಿದ್ದು ಸ್ವಲ್ಪ ದಿನ ಕಳೆದ ಮೇಲೆ. ರಕ್ಕಸ ಬಿದ್ದ್ಲತೆ ಅಂತ ಅವಳು ಹೇಳಿದ್ದು ನಂಬಿಕೆ ಬಾರದಿದ್ದರೂ ರಿಸ್ಕು ಯಾಕೆ ಅಂತ Come tomorrow ಎಂದು ಬಾಗಿಲ ಮೇಲೆ ಬರೆದು ಒಂದು ಕಡೆ ಮೂರು ನಾಮವನ್ನು. ಇನ್ನೊಂದು ಕಡೆ ರಕ್ಕಸನ ಚಿತ್ರವನ್ನು ಯಥಾಶಕ್ತಿ ಚಿತ್ರಿಸಿದೆ

ನಡೆಯುವುದೇ ನಾಣ್ಯ. ನಿವೃತ್ತನಾದ ನನ್ನನ್ನು ಯಾರು ಮಾತಾಡಿಸಲು ಬರುತ್ತಾರೆ.

ಕೆಲವಾರಗಳ ಹಿಂದೆ, ಆಗತಾನೇ ಮಲಗಿದ್ದ ನನ್ನನ್ನ ಯಾರೋ ಹೆಸರು ಹಿಡಿದು ಕೂಗಿದರು. ರಕ್ಕಸನೊಡನೆ ಮುಖಾಮುಖಿಗಾಗಿ ಕಾತರಿಸುತ್ತಾ ಎದ್ದು ನಿಂತೆ, ಹೊರ ಗಡೆಯಿಂದ ಒಂದು ಹೆಣ್ಣು ಕಂಠವೂ ನನ್ನನ್ನು ಹೆಸರು ಹಿಡಿದು ಕೂಗಿತು. ರಕ್ಕಸನೂ ಕೂಗುಮಾರಿಯೂ ಒಕ್ಕೂಟರಚಿಸಿಕೊಂಡಿರಬೇಕೆಂದು ಊಹಿಸಿದೆ. ಕ್ಯಾಮರಾಕ್ಕೆ ಫ್ಲ್ಯಾಷ್ ಅಳವಡಿಸಿಕೊಂಡೆ. ಮುನ್ನೆಚ್ಚರಿಕೆಯಾಗಿ ಅವರಕೂಗಿಗೆ ಓ ಎಂದು ಉತ್ತರಿಸಲಿಲ್ಲ. ಇನ್ನೂ ನಾಲ್ಕು ಕಾಲ ಬಾಳಬೇಕೆಂಬ ಆಸೆಯಿದೆ.

ಬಾಗಿಲು ತೆಗೆದೆ. ತಕ್ಷಣ ಒಂದು ಫ್ಲ್ಯಾಷ್ ಹೊಡೆದೆ (ಈಚೆಗೆ ಅದನ್ನು ತೊಳೆಸಿ ಪ್ರಿಂಟ್ ಮಾಡಿಸಿದ್ದೇನೆ. ನಾನು ತೆಗೆದ ಫೋಟೋ ಅಂದರೆ ಷೇಕ್ ಆಗ ದಿದ್ದರೆ ಹೇಗೆ !)

"ಬರೋಣವೇಸಾರ್ ಒಳಕ್ಕೆ" ಎನ್ನುತ್ತಾ ಆಗಂಡೂ, ಹೆಣ್ಣು, ಅವರ ಹಿಂಬಾ ಕರೂ ಒಳಕ್ಕೆ ನುಗ್ಗಿದರು.

ಒಬ್ಬ ಒಂದು ಕರಪತ್ರ ಕೊಟ್ಟ. ಆ ಹೆಣ್ಣು-ನಿಮ್ಮ ಓಟು ಯಾರಿಗೆ ? ಎಂದು ಕೇಳಿದಳು.

ಹಿಂಬಾಲಕರು "ಪಿಕಾಸಿ ಗುರ್ತಿಗೆ" ಎಂದು ಕೂಗಿದರು. ಮನೆ ಮುಂದಿನ ಮರದಲ್ಲಿ ಸುಖನಿದ್ರೆಯಲ್ಲಿದ್ದ ಕಾಗೆಗಳು ಎದ್ದು ಚಲ್ಲಾಪಿಲ್ಲಿಯಾಗಿ ಹಾರಿದವು. ಆ

ಕಾಕಾರವವನ್ನು ಕೇಳಿದ ಪಕ್ಕದ ಮನೆಯವರು (ಆ ದಿನ ನಿರ್ಜಲೇಕಾದಶಿ) ಎದ್ದು ಸ್ನಾನ ಮಾಡಿ ಅಡಿಗೆ ಗಿಡಲು ಅಣಿಯಾದರು.

ಆ ಗಂಡು "ಇವ್ರು ನಮ್ಮೋರು. ಇವ್ರಿಗೆಲ್ಲಾ ಗೊತ್ತೈತೆ ಏನು ಹೇಳ್ರಿ" ಎಂದಿತು. ಭವಿಷ್ಯ ಸುಖಮಯವಾಗಿರಲು ಬಯಸುವವರು ನಿಮಗೆ ಓಟು ಕೊಡ ಬೇಕು" ಎಂದಿತು. ಹೆಣ್ಣು, "ಹೌದು, ಹೌದು" ಎಂದು ಅನುನಾಯಿಗಳ ಬೊಬ್ಬೆ ಯಿಟ್ಟರು.

"ಖಂಡಿತಾ" ಎಂದೆ ನಾನು


" ಇವರು ನಮ್ಮೋರು. ಬರ್ರೀ, ಹಗಲೇಲ್ಲಾ ಹೇಳದು ಬ್ಯಾಡ" ಎಂದಿತು ಗಂಡು. ಎಲ್ಲರೂ ನಿರ್ಗಮಿಸಿದರು.

ಈ ತಿಂಗಳೇ ಮನೆ ಬಾಗಿಲನ್ನು ನಡುರಾತ್ರಿ ಮೂರು ಬಾರಿ ಬಡಿದಿದೆ. ನಾನು ಓ ಎಂದಿಲ್ಲ ಕೂಗುಮಾರಿ ಹೇಗೆ ಬರುವುದೋ ಗೊತ್ತಿಲ್ಲ. ಸುಮ್ಮಸುಮ್ಮನೆ ಯಾಕೆ ರಕ್ತಕಾರಬೇಕು ? ಈ ಮೂರು ಬಾರಿಯೂ ಫೊಟೋ ತೆಗೆದಿದ್ದೇನೆ ನಾಲ್ಕು ಫೋಟೋಗಳೂ ನನ್ನ ಬಳಿಯಲೇ ಇವೆ. ರಕ್ಕಸನಿಗೆ ಇಂಗ್ಲಿಷ್ ತಿಳಿಯುವುದಿಲ್ಲ. ಎಂದು ಖಾತ್ರಿಯಾಗಿ ನಾಳೆ ಬಾ ಎಂದು ಕನ್ನಡದಲ್ಲಿ ಬರೆದ ಮೇಲೆ ನಡುರಾತ್ರಿ ಯಲ್ಲಿ ಯಾರೂ ಬಾಗಿಲು ತಟ್ಟಿಲ್ಲ. ಇದರಿಂದ ಕೂಗುಮಾರಿಯಾಗಲೀ, ರಕ್ಕಸನಾಗಲೀ ಕಾನ್ವೆಂಟಿಗೆ ಸೇರಿದವರಲ್ಲ. ದಿದ್ದಿ ತೇರ ದೇವರ್ ದಿವಾನಾ ಹಾಡಿನ ಅರ್ಥ ಅವರಿಗೆ ಗೊತ್ತಿಲ್ಲ ಎಂದು ಹೇಳಲು ಸಾಕಷ್ಟು ದಾಖಲೆ ಸಿಕ್ಕಹಾಗೇನೂ ಆಗಿಲ್ಲ.

ನಾಳೆ ಬಾ

ಒಮ್ಮೆ ಯಾರೋ ಮಾರ್ಕ್ ಟ್ವೈನ್ ಅನ್ನ "ನೀವು ಅದೃಷ್ಟದಲ್ಲಿ ನಂಬ್ತೀರಾ ?" ಅಂತ ಕೇಳಿದ್ರು.

"ಖಂಡಿತವಾಗಿ, ಹಾಗಿಲ್ದೇ ಇದ್ರೆ ನಾನು ಹೃದಯಾಂತರಾಳದಿಂದ ದ್ವೇಷಿ ಸೋರ ಯಶಸ್ಸನ್ನ ಹೇಗೆ ಎಕ್ಸ್‌ಪ್ಲೇನ್ ಮಾಡಕ್ಕಾಗುತ್ತೆ !" ಅಂದನಂತೆ ಮಾರ್ಕ್‌ಟ್ವೈನ್.


ಕೋಟಿ ಕೋಟಿ ಗ್ರಾಹಕರ ಸಂತಸವೇ ನಮ್ಮ ಸ್ಫೂರ್ತಿ
ಕೆನರಾ ಬ್ಯಾಂಕ್
(ಭಾರತ ಸರ್ಕಾರದ ಉದ್ದಿಮೆ)
ಪ್ರಧಾನ ಕಚೇರಿ, ಜೆ.ಸಿ. ರಸ್ತೆ, ಬೆಂಗಳೂರು 560 002

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.